

# ದೇವರು

# ಮತ್ತು

# ನಾನು

ಪ್ರವೀಣ್ ಮಾಯಾಕರ್

# ಮುನ್ನುಡಿ

ನಮ್ಮೊಳಗಿರುವ ಆಸೆ, ಆತಂಕ, ಅಸಂತಸ, ಕನಿಕರ, ಗರ್ವ, ಚಿಂತೆ, ಜಿಗುಪ್ಸೆ, ತಮಸ್ಸು, ದಿಗುಡ, ನೋವು, ನಲಿವು, ಪ್ರೀತಿ, ಪ್ರಾಣ, ಭಯ, ಭ್ರಮೆ, ಶಂಕೆ,ಕ್ಷಮೆ ಇವೆಲ್ಲವನ್ನುದೇವರಿಗರ್ಪಿಸಿ ನಮ್ಮನ್ನು ನಾವು ಹುಡುಕುವುದನ್ನು ನಾವು ಮರೆತು ತೇಲಿ ಕಳೆದುಹೋಗುವಂತನಿಸುವುದು ನಮೆಗೆಲ್ಲರಿಗೂ ಸಹಜ. ಹೀಗೆ ಕಳೆದು ಹೋದ ಒಂದು ಮುಗ್ಧ ಮನಸ್ಸಿನ ಕಥೆಗಳು ನಿಮಗಾಗಿ!

ಈ ಕಥೆಗಳನ್ನು ನನ್ನ ದೈವ ಸಮಾನರಾದ ಪ್ರೀತಿಯ ತಂದೆ ತಾಯಿಗೆ ಶಿರಸಾ ಅರ್ಪಿಸುತ್ತೇನೆ

# ಸಂಚಿಕೆ ೧ – 'ಪಾಷಾ'ಣ

ಘಂಟೆ ನಾಲ್ಕಾಗಿತ್ತು, ತಿಮ್ಮ ತನ್ನ ಹೊಸ ಚೆಂಡಿನೊಂದಿಗೆ ಆಟ ಆಡಲು ಹೊರಗೆ ಬಂದ. ತನ್ನ ಗೆಳೆಯರಲ್ಲಿ ಯಾರಾದ್ರು ಆಡ್ಲಿಕ್ಕೆ ಬರ್ತಾರ ಅಂತ ಒಮ್ಮೆ ತಮ್ಮ ಗುಪ್ತ ಶಬ್ದವನ್ನು ಜೋರಾಗಿ ಮೊಳಗಿಸಿದ. ದೊಡ್ಡವರಿಗೆ ಯಾರಿಗೂ ಗೊತ್ತಾಗದೆ ಇರಲಿ ಅಂತ ಸೃಷ್ಟಿಸಿದ ಶಬ್ದವಾಗಿತ್ತು ಅದು. ತಿಮ್ಮ ತನ್ನ ಜಾಣ್ಮೆಗೆ ತೃಪ್ತನಾಗಿದ್ದ. ಕಳೆದ ವಸಂತದಲ್ಲಿ ಕೋಗಿಲೆಯ ದನಿ ಕೇಳಿ ತಿಮ್ಮ ಈ ಗುಪ್ತ ಶಬ್ದವನ್ನು ಹುಟ್ಟುಹಾಕಿದ್ದ. ತನ್ನ ನಾಲ್ಕರ ಗೆಳೆಯರ ಬಳಗಕ್ಕೆ ಸೇನಾಧಿಪತಿಯಾಗಿ ಮಾಡಿದ ಹೆಮ್ಮೆಯ ಕೆಲಸವಾಗಿತ್ತು ಅದು. ಕೆ.ಇ.ಬಿಯವರ ಕೃಪೆಯಿಂದ ಆಗಾಗ ಕತ್ತಲಾದಾಗ ಹೊರಗೆ ಕಣ್ಣಾಮುಚ್ಚಾಲೆ ಆಡಲು ಗೆಳೆಯರನ್ನು ಕರೆಯಲು ತಿಮ್ಮ ಬಳಸಿದ್ದ. ಆದರೆ ಈಗ ತನ್ನ ಕೂಗಿಗೆ ಯಾವುದೆ ಸ್ಪಂದನವಿಲ್ಲದಿದ್ದರಿಂದ ಒಬ್ಬನೆ ಚಂಡಿನೊಡನೆ ಆಡಲು ಶುರು ಮಾಡಿದ್ದ.

ಆಕಾಶಕ್ಕೆ ಎಸೆದಿದ್ದ ಚೆಂಡನ್ನು ಹಿಡಿಯಲು ಓಡುತ್ತಿದ್ದಾಗ 'ಟ್ರಿಣ್ ಟ್ರಿಣ್', ಎಂದು ಸೈಕಲ್ ಬೆಲ್ಲು ಕೇಳಿಸಿತು. ತಿಮ್ಮನಿಗೆ ಭಯವಾಗಲು ಶುರುವಾಗಿತ್ತು. ತನ್ನ ನಿದ್ದೆಯನ್ನು ಕದ್ದ ಕೆಟ್ಟ ಕನಸು ನಿಜವಾಗ್ದೆ ಇದ್ರೆ ಸಾಕು ಅನಿಸಿತು. ಶಬ್ದ ಬಂದ ದಿಕ್ಕಿಗೆ ಹೆದರಿಕೊಂಡು ನೋಡಿದ ತಿಮ್ಮ. ಹೌಹಾರಿದ!. ದಪ್ಪಗೆ ಕಪ್ಪಗೆ ದೊಡ್ಡ ಮೀಸೆಯ ಪಾಷಾ ಸೈಕಲ್ ಹೊಡೆಯುತ್ತ ತಿಮ್ಮನೆಡೆಗೆ ಬರುತ್ತಿದ್ದ. ಎದ್ನೊ ಬಿದ್ನೊ ಅಂತ ತಿಮ್ಮ ತನ್ನ ಚೆಂಡು ಮರೆತು ಹತ್ತಿರದ ಮರದ ಹಿಂದೆ ಬಚ್ಚಿಟ್ಟುಕೊಳ್ಳಲು ಓಡಿದ. ಅಡಗಿದ್ದಲ್ಲಿಯೆ ಪಾಷಾ ನನ್ನ ನೋಡದೆಯಿರಲಿ ಎಂದು ದೇವರಲ್ಲಿ ಬೇಡಿದ ತಿಮ್ಮ.

ಮುಂಜಾನೆ ಎದ್ದು ಹಲ್ಲುಜ್ಜಿ ಸ್ನಾನ ಮಾಡಿ ಅಪ್ಪ ಹೇಳಿಕೊಟ್ಟ ಪ್ರಾರ್ಥನೆ ಹೇಳಿ, ಒಳ್ಳೆಯ ಹುಡುಗನಾಗಿದ್ರೆ ಯಾವ ತೊಂದರೆಯು ಬರದಂತೆ ದೇವರು ನೋಡ್ಕೊಳ್ತಾನೆ ಅಂತ ಅಮ್ಮ ಹೇಳಿದ ಮಾತು ನೆನಪಿಗೆ ಬಂತು. ದೇವರು ಎಲ್ಲಿದ್ದಾನೆ ಅನ್ನೋ ಪ್ರಶ್ನೆಗೆ ಸರಿಯಾದ ಉತ್ತರ ಸಿಗದೆ,

'ಅವನು ಮೇಲಿಂದ ಎಲ್ಲ ನೋಡ್ತಿರ್ತಾನೆ. ನೀನು ಹೀಗೆ ತರ್ಲೆ ಪ್ರಶ್ನೆ ಕೇಳ್ತಾ ಓದದೆ ಇದ್ರೆ ದೇವರಿಗೆ ಕೋಪ ಬಂದು ನೀನು ರಾತ್ರಿ ಮಲಗಿದ್ದಾಗ ನಿನ್ನ ಮೂಗು ಕುಯ್ತಾನೆ. ಸುಮ್ಮನೆ ಓದು ಈಗ',

ಅಂತ ಅಮ್ಮ ತಿಮ್ಮನ 'ತರ್ಲೆ' ಪ್ರಶ್ನೆಗೆ ಕಡಿವಾಣ ಹಾಕಿದ್ರು.

'ದೇವ್ರೆ ನೀನು ನೋಡ್ತಾ ಇದ್ರೆ, ದಯವಿಟ್ಟು ಈ ಸಾರ್ತಿ ಈ ಪಾಷಾನಿಂದ ನನ್ನ ಬಚಾವ್ ಮಾಡಪ್ಪ'

ಅಂತ ಮನಸ್ಸಿನಲ್ಲಿಯೆ ಮುಗ್ಧನಾಗಿ ಮತ್ತೊಮ್ಮೆ ಬೇಡಿಕೊಂಡ ತಿಮ್ಮ.

'ದೇವರು ನನ್ನ ನೋಡ್ತಾ ಇದ್ದಾನಾ? ದೇವರಿಗೆ ನಾನು ಕೇಳಿದ್ದು ಕೇಳಿಸ್ತಾ? ನಾನು ಜೋರಾಗಿ ಪ್ರಾರ್ಥನೆ ಮಾಡಬೇಕಾ? ಅಯ್ಯೊ ಏನು ಮಾಡಲಿ ಈಗ?',

ಹೀಗೆ ಹಲವಾರು ಪ್ರಶ್ನೆ ತಿಮ್ಮನ ತರ್ಲೆ ತಲೆಯಲ್ಲಿ ಸುತ್ತಾಡತೊಡಗಿದವು.

# ದೇವರು ಮತ್ತು ನಾನು

ಹತ್ತನೆಯ ವಯಸ್ಸಿನಲ್ಲಿ ಬೇರೆ ಹುಡುಗರು ಇನ್ನು ಚಂಡಿನೊಡನೆ ಮಾತ್ರ ಆಡುತ್ತಿದ್ದರೆ ತಿಮ್ಮನಿಗೆ ಸೈಕಲ್ ಕಲಿಯುವ ಆಸೆ. ಈ ಆಸೆಯೇ ತಿಮ್ಮನಿಗೆ ಈ ದಿನ 'ಪಾಷಾ'ಣವಾಗಿತ್ತು. ಅಮ್ಮನಿಗೆ ಹೇಳಿದ್ರೆ ಬೈಗುಳ, ಅಪ್ಪನಿಗೆ ಹೇಳೋ ಧೈರ್ಯವಿಲ್ಲ. ದೇವರು ರಾತ್ರಿ ಬಂದು ಮೂಗು ಕುಯ್ಯೊ ಭಯ ಬೇರೆ. ತಪ್ಪು ಮಾಡಿದ್ದನೆಂಬ ಯೋಚನೆಯೇ ದೇವರಲ್ಲಿ ಭಯ ಹುಟ್ಟಿಸಿತ್ತು. ಆದರೆ ಈಗ ಪಾಷಾ ನೋಡಿದರೆ ದೇವರ ಮೊರೆಹೋಗುವ ಪರಿಸ್ತಿತಿ. ತಿಮ್ಮನಿಗೆ ಭಯ ಸಂಕಟ ಎರಡೂ. ಪಾಷಾ ಹತ್ತಿರವಾಗುತ್ತಿದಂಗೆ ಬೆವರು ಸುರಿಯಲಾರಂಭಿಸಿತು.

'ಯಾಕಾದ್ರೂ ನಾನು ಕೆಟ್ಟ ಹುಡುಗನಾಗಿದ್ದೆ, ಈ ರಾತ್ರಿ ದೇವರು ಖಂಡಿತ ಮೂಗು ಕುಯ್ಯುತ್ತಾನೆ',

ಅಡಗಿದ್ದಲ್ಲಿಯೆ ಹೆದರಿದ ತಿಮ್ಮ.

ಪಾಷಾನ ಸೈಕಲ್ ಸದ್ದು ಕಿವಿಗೆ ಹತ್ತಿರವಾಯಿತು. ತಿಮ್ಮನ ಹೆದರಿಕೆ ಮೆಟ್ಟಿಲೇರಿತು. ಪಾಷಾನ ಭಯ ತಡಿಯಲಾರದೆ ಜೋರಾಗಿ ಭಯದಿಂದ ಅರ್ಚುತ್ತಾ ಮನೆಯಡೆಗೆ ಓಡಿದ ತಿಮ್ಮ. ಬಟ್ಟೆ ಒಗೆಯುತ್ತಿದ್ದ ಅಮ್ಮನ ಬಳಿ ಓಡಿ,

' ಅಮ್ಮ, ಅಮ್ಮಾ! ದೇವರು ನನ್ನ ಮೂಗು ಕೊಯ್ಯದೆ ಇರಲು ಏನು ಮಾಡಬೇಕು?' ಎಂದ. ಅಮ್ಮ ನಗುತ್ತಲೆ 'ಅಂಥ ಕೆಲಸ ಏನು ಮಾಡಿದೆ?'.

ತಿಮ್ಮನಿಗೆ ಇದು ಪರೀಕ್ಷೆಯ ಘಳಿಗೆ.

'ಅಮ್ಮ ಅದು, ಅದು... ಆವತ್ತು ಸೈಕಲ್ ಕಲಿಯೋಕೆ, ನಿನ್ನ ಹತ್ತಿರ ೧ ರೂಪಾಯಿ ತಗೊಂಡಿದ್ನಲ್ಲ, ಆವತ್ತು ೧ ತಾಸಿಗಿಂತ ಹೆಚ್ಚಿಗೆ ಸೈಕಲ್ ಹೊಡೆದಿದ್ದೆ. ಅದಕ್ಕೆ ಪಾಷಾ ಸಿಟ್ಟಿಗೆದ್ದು ಇನ್ನು ನಾಲ್ಕಾಣಿ ತಗೊಂಡ್ಬಾ ಇಲ್ಲಾ ನಿಂಗೆ ಸೈಕಲ್ ಇಲ್ಲಾ ಅಂದ. ನಾನು ಹೂಂ ಅಂದೆ ಆದ್ರೆ ನಿನ್ನ್ ತ್ರ ಹೆಚ್ಚಿಗೆ ಕಾಸು ಕೇಳೋದಕ್ಕೆ ಧೈರ್ಯ ಬರದೆ, ಶಾಲೆಗೆ ಹೋಗ್ತಾ ಬರ್ತಾ ಪಾಷಾನಿಂದ ಕಣ್ಣು ತಪ್ಪಿಸಿದ್ದೆ. ಈಗ ಪಾಷಾನ ನೋಡಿದೆ, ಎಲ್ಲಿ ನನ್ನ ಹಿಡಿದು ಹೊಡೆಯುತ್ತಾನೆಂದು ಭಯದಿಂದ ಹೆದರಿ ಓಡಿ ಬಂದೆ. ದೇವರಲ್ಲಿ ಬೇಡಿದೆ, ಆದರೆ ನೀನು ಹೇಳಿದಂಗೆ ನಾನು ಕೆಟ್ಟ ಹುಡುಗನಾಗಿದ್ರೆ ದೇವರು ನನ್ನ ಮೂಗು ಕೊಯ್ಯುತ್ತಾನೆಂದು ಭಯ ಬಂತು, ಏನು ಮಾಡೋದು ಅಮ್ಮ?'.

ಆದಕ್ಕೆ ಅಮ್ಮ ಶಾಂತವಾಗಿ ಉತ್ತರಿಸಿದರು,

'ಹೂಂ ನೀನು ತಪ್ಪು ಮಾಡಿದೆ, ಆದರೆ ದೇವರು ನೀನು ಈಗ ಹೆದರಿವುದನ್ನ ನೋಡಿದ್ದಾರೆ, ನೀನು ನಿನ್ನ ತಪ್ಪು ಒಪ್ಪಿಕೊಂಡಿದ್ದರಿಂದ ನಿನ್ನನ್ನು ಕ್ಷಮಿಸುತ್ತಾರೆ'. 'ದೇವರು ಕ್ಷಮಿಸದಿದ್ದರೆ ಏನು ಮಾಡೋದು ಅಮ್ಮ?'.

'ನಾನು ನಿನಗೋಸ್ಕರ ದೇವರಲ್ಲಿ ಬೇಡಿಕೊಳ್ಳುವೆ, ಪಾಷಾನಿಗೆ ದುಡ್ಡು ಕೂಡ ಕೊಡುವೆ, ಆದರೆ ಮುಂದೆ ಈ ರೀತಿ ತಪ್ಪು ಮಾಡಬೇಡ, ನೀನೇ ನೋಡಿದ ಹಾಗೆ, ನಿನಗೆ ಚಿಂತೆ ಭಯ ಎರಡೂ ಕಾಡ್ತು, ಈಗ ಹೋಗಿ ಕೈಕಾಲು ತೊಳಿ, ಊಟ ಮಾಡೋಣ'.

ತಿಮ್ಮನಿಗೆ ತನ್ನ ತೊಂದರೆಗೆ ಪರಿಹಾರ ಸಿಕ್ಕ ಸಂತೋಷ ಮತ್ತು ತನ್ನ ಮೂಗಿಗೆ ಕುತ್ತಿಲ್ಲವೆಂದು ತಿಳಿದು ಬಹಳ ಸಂತೋಷವಾಯಿತು.

ಆದರೆ ತಿಮ್ಮನ ತರ್ಲೆ ಪ್ರಶ್ನೆಗೆ ಉತ್ತರ ಇದೆಯೆ? ದೇವರು ಎಲ್ಲಿದ್ದಾನೆ? ತಿಮ್ಮನ ತಪ್ಪಿಗೆ ದೇವರು ಅವನ ಮೂಗನ್ನು ಕೊಯ್ಯುವನೆ? ಅಥವಾ ಅಮ್ಮನ ಪ್ರಾರ್ಥನೆಗೆ ದೇವರು ತಿಮ್ಮನನ್ನು ಕ್ಷಮಿಸುವನೆ? ದೇವರು ಇವೆಲ್ಲವನ್ನು ನೋಡುತ್ತಿರುವನೆ? ಪ್ರಶ್ನೆಗಳು ಬಹಳ! ಈ ಸಂಚಿಕೆಯಿಂದ ನನ್ನೊಡನೆ ದೇವರನ್ನು ಹುಡುಕುವ ಕಾರ್ಯಕ್ಕೆ ನೀವು ಸೇರಬಹುದು. ಮುಂಬರುವ ಸಂಚಿಕೆಗಳಲ್ಲಿ ಗೂಬೆ ತಿಮ್ಮನ ಕಥೆಗಳೊಂದಿಗೆ ತಿಮ್ಮನ ತರ್ಲೆ ಪ್ರಶ್ನೆಗೆ ಉತ್ತರ ಹುಡುಕೋಣ.

# ಸಂಚಿಕೆ ೨ - ಹುಣಿಸೆಯ ಹರಣ

ತಿಮ್ಮ ಎಂದಿನಂತೆ ಮುಂಜಾನೆದ್ದು ಶಾಲೆಗೆ ಹೊರಟ. ಶಾಲೆಯಲ್ಲಿ ಆ ದಿನ ವಿಶೇಷ ದಿನ ಕಾರಣ ಅಂದು ವಸಂತಮಹೋತ್ಸವ. ತಿಮ್ಮನಿಗೆ ಅದರ ಬಗ್ಗೆ ಎರಡು ಕಾಳೂ ಗೊತ್ತಿಲ್ಲ. ಕನ್ನಡ ಮೇಡಮ್ ಅಂದು ತುಂಬಾ ಸಂತಸದಲ್ಲಿದ್ದಂತೆ ಕಾಣುತ್ತಿತ್ತು.ಕೈಯಲ್ಲಿದ್ದ ಹಾಳೆಗಳನ್ನು ಸರಿಪಡಿಸುತ್ತ ಸ್ಟೇಜನ್ನೇರಿ, ಸಾಲಾಗಿ ಪಾಳೆಯಲ್ಲಿ ಸೈನಿಕರಂತೆ ನಿಂತಿದ್ದ ಮಕ್ಕಳಿಗೆ ಭಾಷಣ ಮಾಡಲು ಮುಂದಾದರು.

”ಮಕ್ಕಳೆ! ಇಂದಿನ ದಿನ ಒಂದು ವಿಶೇಷ ಹಬ್ಬದ ದಿನ. ಇಂದು ನಾವು ಯಾವ ದೇವರಿಗೂ ಪ್ರಾರ್ಥನೆ ಮಾಡುವುದಿಲ್ಲ. ಯಾವೆ ಗುಡಿಗೂ ಹೋಗಿ ಅರ್ಚನೆ ಮಾಡುವುದಿಲ್ಲ. ಇಂದು ನಾವು ದಿನನಿತ್ಯವೂ ಉಸಿರಡುವ ಗಾಳಿಗೆ, ದಿನವೂ ತಿನ್ನುವ ಧಾನ್ಯ, ಫಲಗಳಿಗೆ ಮೂಲವಾದ ಗಿಡಮರಗಳನ್ನ ಪೂಜಿಸುವ ದಿನ. ಇಂದು ನಾವು ಹೊಸ ಗಿಡಗಳನ್ನ ನೆಟ್ಟು, ನಮ್ಮ ಕೈಯಿಂದ ಪ್ರಕೃತಿಯನ್ನು ಮಾಲಿನ್ಯಗಳಿಂದ ಪಾರುಮಾಡುವ ದಿನ”

ಮೇಡಮ್ ಗಂಟಲು ಸರಿಮಾಡಿಕೊಳ್ಳುತ್ತಿರುವಾಗ, ಗುಂಡ ಎದುರಿಗೆ ನಿಂತ ತಿಮ್ಮನಿಗೆ ಮೆಲ್ಲದನಿಯಲ್ಲಿ ನಗುತ್ತಾ

"ಲೇ, ಇವತ್ತು ಕ್ಲಾಸ್ ಇಲ್ಲಾ ಕಣೊ! ಒಳ್ಳೆದಾಯಿತು ಈ ಹಬ್ಬ ಬಂದಿದ್ದಕ್ಕೆ, ನಾನು ಮ್ಯಾತ್ಸ್ ಹೋಮ್ವರ್ಕ್ ಮಾಡಿಲ್ಲ. ಸದ್ಯ ಬಚಾವ್! ಹಿ ಹಿ”

ಇಬ್ಬರು ಪಿಸುದನಿಯಲ್ಲಿ ನಕ್ಕರು. ಹತ್ತಿರದಲ್ಲೆ ನಿಂತಿದ್ದ ಪಿ.ಟಿ ಮೇಷ್ಟ್ರು ಸದ್ದು ಕೇಳಿ,

"ಯಾರಲ್ಲಿ! ಯಾರೂ ಮಾತಾಡಬಾರದು," ಎಂದು ಗದರಿಸಿದರು.

ಮೇಡಮ್ ಸದ್ದಿನಿಂದ ಕೊಂಚ ವಿಚಲಿತರಾಗಿ ಜೋರಾಗಿ ”ಗಿಡಗಳೇ ಗಮನವಿಟ್ಟು ಕೇಳಿ, ಮಕ್ಕಳು ನಮಗೆ ಬಹಳ ಮುಖ್ಯ”

ಕನ್ನಡ ಮೇಡಮ್ರು ತಪ್ಪಿಗೆ ಪಿ.ಟಿ. ಮೇಷ್ಟ್ರಿಗೆ ನಗು ತಡೆಯಲಾರದೆ ಜೋರಾಗಿ ನಕ್ಕುಬಿಟ್ಟರು. ಒಂದರಿಂದ ಮೂರನೆಯ ತರಗತಿ ಹುಡುಗರನ್ನು ಬಿಟ್ಟು ಎಲ್ಲ ಮಕ್ಕಳು ಜೋರಾಗಿ ಪಿ.ಟಿ ಮೇಷ್ಟ್ರ ನೆಗೆಗೆ ನಗೆ ಸೇರಿಸಿದರು. ಕನ್ನಡ ಮೇಡಮ್ ಅಲ್ಪ ತಬ್ಬಿಬ್ಬಾಗಿ ”ಶ್” ಎನ್ನುತ್ತಾ.

"ನಾನು ಏನು ಹೇಳ್ತಾ ಇದ್ದೆ ಅಂದ್ರೆ, ಮಕ್ಕಳೆ ಗಮನವಿಟ್ಟು ಕೇಳಿ, ಗಿಡಗಳು ನಮಗೆ ಬಹಳ ಮುಖ್ಯ. ಅವುಗಳ ರಕ್ಷಣೆ ಪರಿಸರದ ಸಮತೋಲನವನ್ನು ಕಾಪಾಡಲು ಅವಶ್ಯಕ. ಪರಿಸರದಿಂದ ನಾವು ಸಾಕಷ್ಟು ಲಾಭವನ್ನು ಪಡೆಯುತ್ತೇವೆ, ಹಣ್ಣು, ಧಾನ್ಯ, ಗಾಳಿ, ನೆರಳು, ಹೀಗೆ ಹಲವಾರು ಸೌಲಭ್ಯಗಳನ್ನು ಪರಿಸರ ನಮಗೆ ನೀಡುತ್ತದೆ. ಇಂದು ನಾವು ಪರಿಸರಕ್ಕೆ ಉಪಕಾರಿಯಾಗಿ ಈ ಹಬ್ಬವನ್ನು ಆಚರಿಸುತ್ತೇವೆ. ಇಂದು ನಾವು ಅರಣ್ಯ ಭವನಕ್ಕೆ ಹೋಗಿ ಅಲ್ಲಿ ಗಿಡಗಳ ಬಗ್ಗೆ ಇನ್ನಷ್ಟು ಮಾಹಿತಿ ಪಡೆದು, ಆನಂತರ ಸಸಿಗಳನ್ನು ನೆಡುತ್ತೇವೆ. ಆದ್ದರಿಂದ ನೀವೆಲ್ಲರೂ ಗಲಾಟೆ ಮಾಡದೆ ನಮ್ಮ ಹಿಂದೆ ಸಾಲಿನಲ್ಲಿ ಬನ್ನಿ."

ಗುಂಡ ತಕ್ಷಣ ಕೈಯೆತ್ತಿ ”ಮೇಡಮ್, ನಾವು ನಾಳೆಯೂ ಸಸಿ ನೆಡಬಹುದಾ?", ಎಂದು ಮೇಡಮ್ನ ತಡೆದ.

"ನಾಳೆಯಷ್ಟೆಯಲ್ಲ ಗುಂಡ ಸಾಧ್ಯವಾದಲ್ಲಿ ನಾವು ದಿನವೂ ಒಂದು ಸಸಿಯನ್ನು ನೆಡಬೇಕು, ನಿಮ್ಮ ಮನೆಯಂಗಳದಲ್ಲಿ, ರಸ್ತೆ ಬದಿಯಲ್ಲಿ ಸಸಿಗಳನ್ನು ನೆಟ್ಟು ಪರಿಸರಕ್ಕೆ ನಿಮ್ಮಿಂದಾಗುವ ಸಹಾಯವನ್ನು ಮಾಡಬೇಕು. ಈಗ ನೀವೆಲ್ಲರೂ ಸದ್ದು ಕೀಟಲೆ ಮಾಡದೆ ಪಿ.ಟಿ ಮೇಷ್ರ ಹಿಂದೆ ಸಾಲಾಗಿ ನಡೆಯಿರಿ, ಅರಣ್ಯ ಭವನಕ್ಕೆ ಹೋಗುವ ಸಮಯವಾಯಿತು".

ಮಕ್ಕಳೆಲ್ಲರೂ ಸಾಲಾಗಿ ತಮ್ಮ ಶಿಕ್ಷಕರ ಹಿಂದೆ ನಡೆದರು.

ದಿನವಿಡೀ ಗಿಡಗಳ ಬಗ್ಗೆ ಬಹಳಷ್ಟು ಮಾಹಿತಿ ಪಡೆದು, ಸಸಿಗಳನ್ನು ನೆಟ್ಟು ಕ್ಲಾಸಿಲ್ಲದ ಸಂತೋಷವನ್ನು ಪಡೆದರು. ಸಂಜೆ ನಾಲ್ಕಕ್ಕೆ ಶಾಲೆ ಮುಗಿಯಿತು. ಎಲ್ಲ ಮಕ್ಕಳಂತೆ ತಿಮ್ಮ ಕೂಡ ಮನೆಯೆಡೆಗೆ ಹೊರಟ. ಆದರೆ ಇಂದು ತಿಮ್ಮನಿಗೆ ಬರಿ ಗಿಡಗಳದ್ದೆ ಯೋಚನೆ, ಅರಣ್ಯ ಭವನದಲ್ಲಿ "ಮಕ್ಕಳೇ! ನೀವು ಮುಂದಿನ ಪ್ರಜೆಗಳು, ನೀವು ಪರಿಸರವನ್ನು ಮುಂಬರುವ ವರ್ಷಗಳಿಗೆ ಉತ್ತಮವಾಗಿಸಬೇಕು" ಎಂಬ ಮಾತು ಕಿವಿಯಲ್ಲಿ ಗುಣುಗುತ್ತಿತ್ತು.

ತಿಮ್ಮ ಅಮ್ಮನನ್ನು ನೋಡಿ, ಓಡುತ್ತಾ "ಅಮ್ಮಾ ಇವತ್ತು ಯಾವ ಹಬ್ಬ ಹೇಳು?" ಎಂದ,

ಅಮ್ಮ ಯೋಚಿಸುತ್ತಾ, "ಇವತ್ತು ಯಾವ ಹಬ್ಬಾನೂ ಇಲ್ವಲ್ಲ. ಕ್ಯಾಲೆಂಡರ್ನಲ್ಲಿ ರಜೆಯಿರ್ತಾಯಿತ್ತು, ಹಬ್ಬ ಇದ್ದಿದ್ರೆ"

"ಅಯ್ಯೋ ಅಮ್ಮ ನಿಂಗೆ ಕೆಲ್ಸದಲ್ಲಿ ಏನೂ ಗೊತ್ತಾಗಲ್ಲ, ಇವತ್ತು ಗಿಡಗಳ ಹಬ್ಬ. ನಮ್ಗೆ ಶಾಲೆನಲ್ಲಿವತ್ತು ಕ್ಲಾಸಿರ್ಲಿಲ್ಲ. ಅರಣ್ಯ ಭವನಕ್ಕೆ ಕರ್ಕೊಂಡು ಹೋಗಿದ್ರು. ಗಿಡ ನೆಟ್ವಿ. ಅವರು ನೀವು ಪರಿಸರ ಕಾಪಾಡ್ಬೇಕು, ಮನೆ ಹತ್ರ ಗಿಡ ನೆಡಿ ಅಂದ್ರು. ನಾನು ಒಂದು ಗಿಡ ನೆಡ್ಬೇಕಮ್ಮಾ. ಕಾಸು ಕೊಡು ನಾನ್ ಗಿಡ ತಗೊಂಡ್ ಬರ್ತೀನಿ." ಎಂದು ಸಂತಸದಿಂದೆಂದ

"ಗಿಡ ಎಲ್ಲಿಂದ ತರ್ತೀಯೋ, ಅರಣ್ಯ ಭವನಕ್ಕೇ ಹೋಗ್ಬೇಕು. ಬೀಜ ನೆಡು, ಗಿಡ ಬರತ್ತೆ ತಾನಾಗಿ. ಅಲ್ದೆ ನಮ್ಮನೆ ಮುಂದೆ ಮರಾನೇ ಇದೆ, ಬೇರೊಂದು ಗಿಡ ಬೇಡ ಪುಟ್ಟ. ಕೈಕಾಲು ತೊಳ್ಕೊ, ತಿಂಡಿ ಕೊಡ್ತೀನಿ" ಎಂದಳು ಅಮ್ಮ ಸಂತೈಸುತ್ತ.

"ಊಹುಂ, ನಾನು ಒಂದು ಬೀಜ ನೆಡ್ಬೇಕು, ಅಮ್... ಆದರೆ ಬೀಜ ಚಿಕ್ಕದಿರತ್ತಲ್ಲ, ಅದರಿಂದ ಗಿಡ ಹೇಂಗೆ ಬರತ್ತೆ?" ಮುಗ್ದನಾಗಿ ತಿಮ್ಮ ಕೇಳಿದ. "ಗಿಡ ಬೆಳೆಯೋದೆ ಹಂಗೆ ಕಣೊ, ದೇವರು ಬೀಜಕ್ಕೆ ಜೀವ ಕೊಡ್ತಾನೆ, ಅಮೇಲೆ ಗಿಡ ಬೆಳೆಯುತ್ತೆ, ಮಳೆ ನೀರಿಂದ ಬೆಳೆದು ಗಿಡ ಮರವಾಗತ್ತೆ"

ತಿಮ್ಮ ತಕ್ಷಣ ಕೇಳಿದ "ಅಮ್ಮ ಆದ್ರೆ ನಾನು ಬೀಜ ಹಾಕಿ, ನೀರು ಹಾಕಿದ್ರೆ, ಗಿಡ ಬೆಳೆಯುತ್ತಲ್ಲ, ಆಗ ಆ ಗಿಡಕ್ಕೆ ನಾನು ದೇವರಾಗ್ತೀನಲ್ವ?"

ತಿಮ್ಮನ ತರ್ಲೆ ಪ್ರಷ್ನೆಗೆ ಅಮ್ಮ ನಗುತ್ತ ಉತ್ತರಿಸಿದರು "ನೀನು ನೀರು, ಗೊಬ್ಬರ ಹಾಕಿ ಗಿಡ ಬೆಳೆಸಬಹುದು, ಆದ್ರೆ ದೇವರು ಆ ಬೀಜಕ್ಕೆ ಜೀವಕೊಡ್ದಿದ್ರೆ ಬೀಜ ಬೆಳೆಯಲ್ಲ, ಈಗ ತರ್ಲೆ ಪ್ರಶ್ನೆ ಬಿಟ್ಟು ತಿಂಡಿ ತಿನ್ನು ಬಾ, ನಿಮ್ ಮೀಸೆ ಮಾಮ ಊರಿಂದ ತಿಂಡಿ ತಂದಿದಾರೆ"

ತಿಮ್ಮ ಆಶ್ಚರ್ಯದಿಂದ "ಅಯ್ಯೊ ಮೀಸೆ ಮಾಮ ಮತ್ತೆ ಬಂದ್ರಾ ಅವರ ಮೀಸೆ ನೋಡಿದ್ರೆ ನಂಗೆ ಭಯ ಆಗುತ್ತಪ್ಪಾ, ನಾನ್ ತಿಂಡಿ ಮಾತ್ರ ತಿಂತೀನಿ ಮೀಸೆ ಮಾಮ ಬಂದು ಕೇಳಿದ್ರೆ ನಾನು ಸುಸ್ತಾಗಿ ಬೇಗ ಮಲಗ್ದೆ ಅಂದ್ಬಿಡು. ಏನ್ ತಿಂಡಿ ತಂದಿದಾರೆ" ಅಮ್ಮಾ ನಗುತ್ತಾ "ಸರಿ, ನಿಂಗೆ ಇಷ್ಟ ಅಂತ, ಪೇಡಾ ಮತ್ತು ಹುಣಿಸೆ ತೊಕ್ಕು ತಂದಿದಾರೆ"

"ಹೂಂ ಕೊಡು ಕೊಡು" ಎಂದು ತಿಮ್ಮ ತಿನ್ನಲು ಮುಂದಾದ.

ಹುಣಿಸೆ ತೊಕ್ಕಿನ ಕಣ್ಣೊಡುಸುವ ರುಚಿಯೊಂದಿಗೆ ತಿಮ್ಮನಿಗೆ ಬೇಕಾದ ಹುಣಿಸೆ ಬೀಜವೂ ಸಿಕ್ಕಿತು. ತಿಮ್ಮನಿಗೆ ಬಹಳ ಸಂತೋಷವಾಯಿತು. ಅಮ್ಮನ ಕಣ್ಣು ತಪ್ಪಿಸಿ ಬೀಜವನ್ನು ಮೆಲ್ಲಗೆ ಕಿಸೆಗಿಳಿಸಿದ. ತಿಂಡಿ ಬಳಿಕ ಆಟದ ನೆಪ ಹೇಳಿ ಮನೆಯ ಅಂಗಳಕ್ಕೆ ಬಂದ. ಬೆಣ್ಣೆ ಕದ್ದ ಗೋಪಾಲನಂತೆ ಆ ಕಡೆ ಈ ಕಡೆ ನೋಡುತ್ತ ಮೆಲ್ಲಗೆ ತನ್ನ ಕಿಸೆಯಿಂದ ಬೀಜವನ್ನು ತೆಗೆದು, ಬಿತ್ತಲು ಶುರುಮಾಡಿದ.

ಅಂಗಳದಲ್ಲಿ ಆಗಲೇ ಇದ್ದ ಗುಲ್ ಮೊಹರ್ ಮರಕ್ಕೆ ತಾನು ಬೆಳೆಯುವ ಗಿಡ ಜೊತೆಯಾಗಲೆಂದು ಅದರ ಬುಡದ ಬಳಿ ಬಿತ್ತಲು ನಿರ್ಧರಿಸಿದ. ಅಮ್ಮನಿಗೆ ಗೊತ್ತಾಗದಂತೆ ಕದ್ದ ಚಮಚದಿಂದ ಮಣ್ಣು ಅಗೆಯಲಾರಂಭಿಸಿದ. ಕಾಲು ಅಡಿ ಮಣ್ಣು ಅಗೆದ ಮೇಲೆ ಬೀಜವನ್ನು ಬಿತ್ತಿದ. ಮತ್ತೊಮ್ಮೆ ಆ ಕಡೆ ಈ ಕಡೆ ನೋಡಿ ಮಣ್ಣು ಮುಚ್ಚಿ ನೀರು ಹಾಕಿದ. ಗಿಡ ಬೆಳೆಯುವುದನ್ನು ನೋಡಲು ಅದರ ಬಳಿ ಕಾಯುತ್ತ ಕುಳಿತ. ಅರ್ಧ ಘಂಟೆಯಾದರೂ ಗಿಡ ಬೆಳೆಯದ್ದನ್ನು ಕಾಣದೆ ಬೇಸತ್ತು ಮನೆಯೊಳಗೆ ನಡೆದ.

"ಅಮ್ಮಾ, ಒಂದು ಗಿಡ ಬೆಳೆಯಲು ಎಷ್ಟು ಸಮಯ ಬೇಕು?" ಎಂದು ಮುಗ್ಧನಾಗಿ ಕೇಳಿದ.

"ಯಾವ ಗಿಡ ಬೆಳೆಸ್ತಿದಿಯೊ ಅದರೆ ಮೇಲೆ ಹೋಗತ್ತೆ. ಒಂದೆರಡು ದಿನದಲ್ಲಿ ಬೀಜ ಮೊಳಕೆಯೊಡೆದು ಬೆಳೆಯೋಕೆ ಶುರುವಾಗತ್ತೆ. ನೀನು ಬೀಜ ಬಿತ್ತಿದ್ಯಾ?"

"ಅಮ್ಮಾ ಅದು..ಅದು.. ಹುಣಿಸೆ ತೊಕ್ಕಿನಿಂದ ಬೀಜ ಸಿಕ್ತು ಅದನ್ನೆ ಬಿತ್ತಿದೆ."

"ಅಯ್ಯೊ ಹುಣಿಸೆ ಮರ ಮನೆಯಂಗಳದಲ್ಲಿ ಒಳ್ಳೆಯದಲ್ವೋ ಮೊದ್ಲು ತೆಗಿ ಅದನ್ನ."

"ಯಾಕಮ್ಮ ಒಳ್ಳೆಯದಲ್ಲ ಅಮ್ಮಾ ಅದು ಮರ ಅಲ್ವಾ ಅದು ಹಣ್ಣು ಗಾಳಿ ಕೊಡಲ್ವಾ?"

"ಅಯ್ಯೊ ನಿಂಗ್ ಅರ್ಥ ಆಗಲ್ಲ ಹುಣಿಸೆ ಮರದಲ್ಲಿ ದೆವ್ವ ಕೂರ್ತಾವೆ ಅಂತ ನಿಮ್ಮಜ್ಜಿ ಹೇಳ್ತಾ ಇದ್ರು. ಯಾಕೆ ಸುಮ್ಮನೆ ತೊಂದ್ರೆ? ಎಲ್ಲಿ ಹಾಕಿದ್ದಿಯಾ ಅದನ್ನ."

"ಅಮ್ಮಾ ದಯವಿಟ್ಟು ನಾನು ಗಿಡ ಬೆಳೆಸ್ಬೇಕಮ್ಮಾ ಕಿತ್ತಾ ಕೋದು ಬೇಡಮ್ಮ."

"ಸರಿ ಸಧ್ಯಕ್ಕೆ ಸುಮ್ಮನೆ ಬಿಡ್ತೀನಿ ಹೋಗು ಈಗ ಹೋಂವರ್ಕ್ ಮಾಡು. "

"ಸರಿ", ಎಂದು ಸಂತಸದಿಂದ ತಿಮ್ಮ ಹೋಂವರ್ಕ್ ಮಾಡಲು ಹೊರಟ.

ಮುಂಜಾನೆದ್ದಾಗ ತಿಮ್ಮನಿಗೆ ಶಾಲೆಗೆ ಹೋಗುವ ಬದಲು ಗಿಡದ ಚಿಂತೆ. ತಾನು ಬಿತ್ತಿದ ಬೀಜಕ್ಕೆ ದೇವರು ಜೀವ ತುಂಬಿದ್ನಾ? ಬೀಜಕ್ಕೆ ನೀರು ಸಾಕಾಯಿತಾ? ಗಿಡ ಬೆಳೆದಿದೆಯಾ? ಈ ಯೋಚನೆಗಳೊಂದಿಗೆ ತಿಮ್ಮ ಮನೆಯಂಗಳಕ್ಕೆ ಓಡಿದ. ತಿಮ್ಮನ ಆಶ್ಚರ್ಯಕ್ಕೆ ಸಣ್ಣದಾದ ಹುಣಿಸೆ ಗಿಡ ಮೊಳಕೆಯೊಡೆದಿತ್ತು. ತಿಮ್ಮನ ಸಂತಸಕ್ಕೆ ಪಾರವಿರಲಿಲ್ಲ. ಸಂತಸದಿಂದ ಗಿಡದ ಬಗ್ಗೆ ಹೇಳಲು ಅಮ್ಮಾ ಎಂದು ಅರಚುತ್ತಾ ಮನೆಯೊಳಗೆ ಓಡಿದ.

"ಅಮ್ಮ ಅಮ್ಮಾ ಗಿಡ ಬೆಳ್ದಿದೆ", ಎಂದ ತಿಮ್ಮನ ಎದುರಿಗೆ ದಪ್ಪನೆ ಮೀಸೆಯ ಮೀಸೆ ಮಾಮ ಹಲ್ಲುಜ್ಜುತ್ತಾ ಎದುರಾದ.

"ಅರೆ ತಿಮ್ಮಾ! ನೆನ್ನೆ ಬೇಗ ಮಲಕ್ಕ್ದೆ ನೀನು ನನ್ ಕೈಗೆ ಸಿಗ್ಲಿಲ್ಲ. ಬಾ ಇಲ್ಲಿ ಅದೇನು ಗಿಡ ಬೆಳಸಿದ್ದೀಯಾ ತೋರ್ಸು ನಂಗೆ.", ಎಂದವನೆ ತಿಮ್ಮನನ್ನು ಗಬಕ್ಕನೆ ಹಿಡಿದು ಮೇಲಕ್ಕೆತ್ತಿ ಪ್ರೀತಿಯಿಂದ ಮುತ್ತಿಟ್ಟು ಹೆಗಲ ಮೇಲೇರಿಸಿದ ತಿಮ್ಮನ ಮೀಸೆ ಮಾಮ.

"ಮೀಸೆ ಮಾಮ ಇಳಿಸೋ ನನ್ನ ಅಮ್ಮಂಗೆ ಗಿಡ ತೋರಿಸ್ಬೇಕು ಇಳ್ಸೋ", ಇನ್ನೇನು ಅತ್ತುಬಿಡುವೆ ದನಿಯಲ್ಲಿ ಕೇಳಿಕೊಂಡ "ತಿಮ್ಮ. ನಂಗೆ ತೋರ್ಸು ನೀನು ಮೊದ್ಲು ಆಮೇಲೆ ಅಮ್ಮಂಗೆ ತೋರ್ಸು", ಎಂದು ತಿಮ್ಮನನ್ನು ಅಂಗಳಕ್ಕೆ ಕರೆತಂದ.

"ಅಲ್ಲಿ ಮರದ ಕೆಳಗೆ ಇದೆ ನೋಡು ಮಾಮ. ಎಷ್ಟು ಚೆನ್ನಾಗಿದೆಯಲ್ವಾ."

"ಅಯ್ಯೊ ತಿಮ್ಮ! ಹೋಗಿ ಹೋಗಿ ಹುಣಿಸೆ ಮರಾನಾ ಬೆಳ್ಸೋದು. ಮನೆಯೊಳಗೆ ಒಳ್ಳೆಯದಲ್ಲ ಅಂತ ಗೊತ್ತಿಲ್ಲಾ ನಿಂಗೆ?." "ಇಲ್ಲಾ ಮಾಮ ಆದ್ರೆ ಅದನ್ನ ಬಿತ್ತಿದ್ದು ನಾನು ಅದು ಕೆಟ್ಟದ್ದಲ್ಲ. ರಾತ್ರಿ ನಾನು ಮಲಗ್ದಾಗ ದೇವರು ಜೀವ ಕೊಟ್ಟಿದ್ದಾರೆ."

"ಜೀವ ಕೊಟ್ಟಿದ್ದು ನೀನು ಈ ಬೀಜ ಬೆಳೆಸಿ, ಇದು ಒಳ್ಳೆಯದಲ್ಲ. ದೆವ್ವ ಕೂರ್ತಾವೆ ಇದ್ರಲ್ಲಿ.", ಎಂದವನೆ ಮೀಸೆ ಮಾಮ ತಿಮ್ಮನನ್ನು ಮೊಳಕೆಯ ಮೇಲೆ ಇಳಿಸಲುಣುವಾದ.

"ಬೇಡ ಮಾಮ ಬೇಡಾ", ಎಂದು ತಿಮ್ಮ ಅಳುತ್ತಾ ಕೇಳಿಕೊಂಡ.

ಮೀಸೆ ಮಾಮ ತಿಮ್ಮನ ಮಾತಿಗೆ ಕಿವಿಗೊಡದೆ ತಿಮ್ಮನನ್ನು ಗಿಡದ ಮೇಲೆ ಇಳಿಸಿದ. ತಿಮ್ಮ ಕಾಲಿನಡಿ ಸಿಕ್ಕು ಮೊಳಕೆಯು ಮುರಿದಿತ್ತು. ತಿಮ್ಮನ ಕಣ್ಣಿನಲಿ ನೀರು ಸುರಿಯ ತೊಡಗಿತು. ಜೋರಗಿ ಅಳುತ್ತಾ ತಿಮ್ಮ ಮನೆಯೊಳಗೆ ಓಡಿದ. ಮೀಸೆ ಮಾಮನ ಮೇಲೆ ಕೋಪದಲ್ಲಿದ್ದ. ತಿಮ್ಮನಿಗೆ ಬಹಳ ದುಃಖವಾಯಿತು. ತಿಮ್ಮ ಅಳುತ್ತಾ ಹಾಸಿಗೆ ಮೇಲೆ ಮಲಗಿದ. ದೇವರು ಕೊಟ್ಟ ಜೀವಕ್ಕೆ ಇಂದು ತಾನು ಕೊನೆಯಾದೆಯೆಂಬ ಚಿಂತೆ ತಿಮ್ಮನನ್ನು ಕಾಡಿತು. ತಿಮ್ಮನ ಹುಣಿಸೆ ಹರಣ ತಿಮ್ಮನನ್ನು ಮುಂದೆಯೂ ಕಾಡಿತು.

# ದೇವರು ಮತ್ತು ನಾನು

ತಿಮ್ಮನು ಹುಣಿಸೆ ಬೀಜಕ್ಕೆ ತಾನೆ ದೇವರಾದನೆ? ಹುಣಿಸೆ ಬೀಜಕ್ಕೆ ಜೀವ ದೇವರು ಕೊಟ್ಟರೆ, ಅದು ಮರವಾದ ಮೇಲೆ ದೆವ್ವಗಳು ಕೂರಲು ದೇವರು ಬಿಡುವನೆ? ಹುಣಿಸೆಯ ಹರಣ ಮಾಡಿದ ತಿಮ್ಮನಿಗೆ ಶಿಕ್ಷೆಯಾಗುವುದೆ? ದೇವರು ಇವೆಲ್ಲವನ್ನು ನೋಡುತ್ತಿರುವನೆ? ಪ್ರಶ್ನೆಗಳು ಬಹಳ! ಈ ಸಂಚಿಕೆಯಿಂದ ನನ್ನೊಡನೆ ದೇವರನ್ನು ಹುಡುಕುವ ಕಾರ್ಯಕ್ಕೆ ನೀವು ಸೇರಬಹುದು. ಮುಂಬರುವ ಸಂಚಿಕೆಗಳಲ್ಲಿ ಗೂಬೆ ತಿಮ್ಮನ ಕಥೆಗಳೊಂದಿಗೆ ತಿಮ್ಮನ ತರ್ಲೆ ಪ್ರಶ್ನೆಗೆ ಉತ್ತರ ಹುಡುಕೋಣ.

# ಸಂಚಿಕೆ ೩ - ಶಾಲಾಪಲಾಯಣ

ತಿಮ್ಮ ಎಂದಿನಂತೆ ತಂಗಿಯೊಡನೆ ಶಾಲೆಗೆ ಹೊರಟ. ತಿಮ್ಮನಿಗೆ ಹಾಗೂ ಅವನ ತಂಗಿಯ ಮುಗ್ಧ ಮುಖಗಳಲ್ಲಿ ಅಷ್ಟಾಗಿ ಉತ್ಸಾಹವೇನೂ ಇರಲಿಲ್ಲ. ಕಾರಣ ಕಳೆದ ತಿಂಗಳಷ್ಟೇ ತಂಗಿ ಮತ್ತು ತಿಮ್ಮನನ್ನು ಈ ಶಾಲೆಗೆ ನೇಮಿಸಿದ್ದರು ಅಮ್ಮ. ತಿಮ್ಮನಿಗೆ ಈ ಶಾಲೆ ಹಾಗೂ ಮೇಡಂಗಳು ಹಿಡಿಸಿರಲಿಲ್ಲ. ತಮ್ಮ ದಿನಚರಿಯನ್ನು ಸರಿಯಾಗಿ ಬಳಸಲು ಬರದ ಮೇಡಂಗಳು ಮಧ್ಯಾಹ್ನದ ವೇಳೆ ಶಾಲೆಯಲ್ಲಿ ಮಕ್ಕಳಿಗೆ ಓದಲು ಹಚ್ಚಿ ತಾವು ೩೦-೪೦ ನಿಮಿಷ ನಿದ್ದೆ ಹೊಡೆಯುತ್ತಿದ್ದರು. ಅವರಲ್ಲಿ ಪಾರ್ವತಿ ಮೇಡಂ ಎಂದರೆ ತಿಮ್ಮನಿಗೆ ಎಲ್ಲಿಲ್ಲದ ಸಿಟ್ಟು.

ಮೊದಲ ದಿನದಿಂದಲೇ ಆಕೆಯನ್ನು ಕಂಡರೆ ಆಗುತ್ತಿರಲಿಲ್ಲ ತಿಮ್ಮನಿಗೆ. ಕಾರಣ ಮೇಡಂನ ಗದರಿಕೆ. ಎಲ್ಲಾ ಮಕ್ಕಳನ್ನು ಸರ್ಕಸ್ಸಿನ ರಿಂಗ್ಮಾಸ್ಟರಿನಂತೆ ಕಡ್ಡಿ ಹಿಡಿದು ಗದರಿಸಿ ಹೆದರಿಸಿ ಓದಲು ಹೇಳುತ್ತಿದ್ದರು. ಮೊದಲೇ ಮಕ್ಕಳು ಮುಗ್ಧರು, ಸಣ್ಣ ಪುಟ್ಟ ತೀಟೆ ಬಿಟ್ಟರೆ ದೊಡ್ಡವರು ಹೇಳುವಂತೆ ಕೇಳುವವರು. ಹೆದರಿಸಿ ಓದು ಎಂದರೆ ಆದೀತೆ? ಇದಕ್ಕೆ ಪರಿಹಾರವನ್ನು ದೊಡ್ಡವರು ಇಲ್ಲಿಯವರೆಗೂ ಅರಿತಿಲ್ಲವೇಕೆ ಎಂಬುದು ತಿಮ್ಮನ ತರಲೆ ವಾದ. ತರಲೆಯಾದರು ಸರಿಯಾಗಿತ್ತು ಅವನ ವಾದ.

ತಿಮ್ಮನ ತಂದೆ ಕಳೆದ ೧೯೮೮ರ ಏಪ್ರಿಲ್ ತಿಂಗಳಷ್ಟೆ ಹತ್ತಿರದ ತುಮಕೂರಿನಿಂದ ಮಹಾನಗರಿಗೆ ರವಾನಿಸಲಾಗಿದ್ದರು. ತಿಮ್ಮ ತುಮಕೂರಿನಲ್ಲಿ ಒಂದು ಸಣ್ಣ ಕಾನ್ವೆಂಟ್ನಲ್ಲಿ ಸಂತಸದಿಂದಿದ್ದನು. ಕ್ರೈಸ್ತರು ನಡೆಸುತ್ತಿದ್ದ ಕಾನ್ವೆಂಟಾಗಿತ್ತು ಅದು. ಅಲ್ಲಿ ತಿಮ್ಮನಿಗೆ ಮೇರಿ ಮೇಡಂ ಪಾಠ ಹೇಳಿಕೊಡುತ್ತಿದ್ದ ಶೈಲಿ ಬಹಳ ಹಿಡಿಸಿತ್ತು. ಕಕ್ಷೆಯಲ್ಲಿ ಮಕ್ಕಳ ಸಂಖ್ಯೆ ಕೇವಲ ಮೂವತ್ತಾಗಿದ್ದರಿಂದ ಮೇಡಂ ಎಲ್ಲರಿಗೂ ಅರ್ಥವಾಗುವವರೆಗೂ ಕಾದು ಮಕ್ಕಳ ಭಾಷೆಯಲ್ಲಿ ಅವರ ಕುತೂಹಲ ಕೆರಳಿಸಿ ಪಾಠದಲ್ಲಿ ಸ್ವಾದ ತುಂಬುತ್ತಿದ್ದರು. ಅಲ್ಲದೆ ಬಹಳ ವ್ಯವಸ್ತಿತವಾಗಿ ಮಕ್ಕಳಿಗೆ ಸಾವಧಾನಗಳು, ಡಿಸಿಪ್ಲಿನ್ ಹಾಗೂ ಹಾಡುಗಳನ್ನು ಮಕ್ಕಳಿಗೆ ಅರ್ಥವಾಗಲು ಕಷ್ಟವಾಗದಂತೆ ಸಲೀಸಾಗಿ ಕಲಿಸುತ್ತಿದ್ದರು. ಆಗಾಗ್ಗೆ ಶಾಲೆ ಆವರಣಕ್ಕೆ ಕರೆದುಕೊಂಡು ಹೋಗಿ ಹಸಿರು, ಪ್ರಾಣಿ ಪಕ್ಷಿಗಳ ಬಗ್ಗೆ ಮಾಹಿತಿ ಕೊಡುತ್ತಿದ್ದರು. ಇವೆಲ್ಲವೂ ತಿಮ್ಮನಿಗೆ ಬಹಳ ಹಿಡಿಸಿತ್ತು.

ತಿಮ್ಮ ಕಲಿಯುವ ಉತ್ಸಾಹದ ಹುಡುಗ, ಅಲ್ಲದೆ ತುಂಬಾ ತುಂಟನೂ ಅಲ್ಲ. ದಿನವೂ ಕೊಟ್ಟ ಹೋಂವರ್ಕ್ ಮಾಡಿಕೊಂಡು ನಿಷ್ಠೆಯಿಂದ ಕಲಿಯುತ್ತಿದ್ದ. ಮೇರಿ ಮೇಡಂ ಕಲಿಸಿಕೊಟ್ಟ ಡಿಸಿಪ್ಲಿನ್ ಆಗಿತ್ತು ಅದು. ಅಲ್ಲದೆ ತಿಮ್ಮನಿಗೆ ದಿನವೂ ಶಾಲೆಗೆ ಟಾಂಗಾದಲ್ಲಿ ಹೋಗುವ ಮಜಾ. ಟಾಂಗಾ ಅಂಕಲ್ ತಿಮ್ಮನಿಗೆ ಟಾಂಗಾದ ಮುಂದೆ ಕುದುರೆ ಹತ್ತಿರ ಕುಳಿತುಕೊಳ್ಳಲು ಅನುವು ಮಾಡಿ ಕೊಡುತ್ತಿದ್ದ. ತಿಮ್ಮನಿಗೆ ಒಮ್ಮೊಮ್ಮೆ ಕುದುರೆ ಓಡಿಸಲು ತನ್ನ ಚಾಟಿಯನ್ನು ಕೂಡ ಕೊಡುತ್ತಿದ್ದ ಟಾಂಗಾ ಅಂಕಲ್. ತಾನು ದೊಡ್ಡವನಾದ ಮೇಲೆ ತನ್ನದೇ ಆದ ಟಾಂಗಾ ಕೊಳ್ಳಲು ಅಪ್ಪ ಅಮ್ಮ ಆಗಾಗ್ಗೆ ಕೊಡುತ್ತಿದ್ದ ಪುಡಿಗಾಸನ್ನು ತನ್ನ ಮಣ್ಣಿನ ಹುಂಡಿಯಲ್ಲಿ ಸೇರಿಸುತ್ತಿದ್ದ ತಿಮ್ಮ. ಕುದುರೆ ಏರಿ ತುಮಕೂರು ಸುತ್ತಾಡುವ ಆಸೆಯಿತ್ತು ಎಳೆಯ ತಿಮ್ಮನಿಗೆ.

ಆದರೆ ಈಗ ಈ ಹೊಸ ಶಾಲೆಗೆ ಬಂದಾಗಿನಿಂದ ತಿಮ್ಮನಿಗೆ ಶಾಲೆಯೆಂದರೆ ಭಯ. ತಿಮ್ಮನ ಮನೆಯಿಂದ ಶಾಲೆಗೆ ೧೦ ನಿಮಿಷದ ದಾರಿ. ತಂಗಿಯ ಕೈ ಹಿಡಿದು ನಡೆಸಿಕೊಂಡು, ಈ ದಿನ ಶಾಲೆಯನ್ನು ಹೇಗೆ ತಪ್ಪಿಸುವುದೆಂದು ಹೊಂಚು ಹಾಕತೊಡಗಿದ. ಹಾಗೆ ಯೋಚಿಸುತ್ತಾ ನಡೆದಂತೆ ತಂಗಿ ತಿಮ್ಮನನ್ನು ಪ್ರಶ್ನಿಸಿದಳು,

"ಅಣ್ಣಾ, ಇವತ್ತೂ ಆ ಪಾರ್ವತಿ ಮೇಡಂ ನಮಗೆ ಹೆದರಿಸ್ತಾರಾ? ನಂಗೆ ತುಂಬಾ ಭಯ ಏನು ಮಾಡೋದು?".

"ಹೆದರಬೇಡ, ನಾವು ಇವತ್ತು ಅಮ್ಮಂಗೆ ನಮ್ಗೆ ಈ ಶಾಲೆ ಬೇಡ ಅಂತ ಹೇಳೋಣ"

"ಅಮ್ಮಾ ಇಲ್ಲಾ ನೀವು ಇಲ್ಲೇ ಓದ್ಬೇಕು ಅಂದ್ರೆ ಏನ್ಮಾಡೋದು ಅಣ್ಣಾ?"

"ಗೊತ್ತಿಲ್ಲಾ, ಏನಾದ್ರೂ ಮಾಡ್ಲೇಬೇಕು. ತುಮಕೂರ್ನಲ್ಲೇ ಚೆನ್ನಾಗಿತ್ತು" ಚಿಂತಿಸುತ್ತಲೇ ಸಮಜಾಯಿಸಿದ.

ಅಷ್ಟರಲ್ಲೇ ಶಾಲೆ ಹತ್ತಿರ ಬಂದಿತ್ತು. ಹೆದರಿಕೊಂಡೇ ಶಾಲೆಯಡೆಗೆ ಇಬ್ಬರೂ ನಡೆದರು. ನಿತ್ಯದಂತೆ ಅಂದೂ ಕೂಡ ಪಾರ್ವತಿ ಮೇಡಂ ಮಕ್ಕಳಿಗೆ ದುರ್ಗೆಯಂತೆ ಕಂಡಳು. ಕೈಯಲ್ಲಿ ಕೋಲು ಹಿಡಿದು, ಪ್ರಾರ್ಥನೆಗೆಂದು ಸಾಲಾಗಿ ನಿಂತ ಮಕ್ಕಳನ್ನು ಒಮ್ಮೆ ದುರಗುಟ್ಟಿದಳು.

"ಇವತ್ತು ಯಾರು ಶೂ ಪಾಲಿಷ್ ಮಾಡಿಲ್ಲಾ, ಯಾರು ಉಗುರು ಕತ್ತರಿಸಿಲ್ಲ, ಯಾರು ಟೈ ಸರಿಯಾಗಿ ಕಟ್ಟಿಲ್ಲ, ಯಾರು ಬೆಲ್ಟ್ ಹಾಕಿಲ್ಲ. ಯಾರು ಹೋಂವರ್ಕ್ ಮಾಡಿಲ್ಲ, ಅವ್ರೆಲ್ಲರಿಗೂ ಶಿಕ್ಷೆ, ಸ್ಕೂಲಿನ ಅಂಗಳದ ತುಂಬಾ ೪ ಸಾರ್ತಿ ಓಡ್ಬೇಕು, ತಿಳೀತಾ" ಎಂದು ತನ್ನ ಜೋರು ಗಂಟಲಿನಿಂದ ಅರಚಿದಳು. ಮೊದಲೇ ಹೆದರಿದ ಮಕ್ಕಳು ಇನ್ನಷ್ಟು ಹೆದರಿದರು. ತಪ್ಪು ಮಾಡದೇ ಇದ್ದವರು ಕೂಡ ನಡುಗಲಾರಂಭಿಸಿದರು.ಎಂದಿನಂತೆ ಇಂದೂ ಕೂಡ ಸುಮಾರು ಇಪ್ಪತ್ತು ಮಕ್ಕಳು ಶಿಕ್ಷೆ ಅನುಭವಿಸಿದರು. ತಿಮ್ಮನಿಗೆ ಅಂದು ಚಿಂತೆಯಿರಲಿಲ್ಲ. ಅವನು ಇವೆಲ್ಲ ತೊಂದರೆಗೆ ಕಡಿವಾಣ ಹಾಕಲು ಹೊಂಚು ಹಾಕಿದ್ದ.

ಎಲ್ಲ ಮಕ್ಕಳು ತಮ್ಮ ತಮ್ಮ ಕಕ್ಷೆಗಳಿಗೆ ಹೊರಟರು. ಎಂದಿನಂತೆ ಮಧ್ಯಾಹ್ನದವರೆಗೂ ಪಾಠಗಳು ನಡೆದವು, ಒಂದು ಘಂಟೆಯ ಸುಮಾರಿಗೆ ಪಾರ್ವತಿ ಮೇಡಂ ತಮ್ಮ ಆಂಗ್ಲ ಪಠ್ಯದೊಂದಿಗೆ ಕಕ್ಷೆಗೆ ಹಾಜರಾದರು. ಎಲ್ಲ ನೂರೈವತ್ತು ಮಕ್ಕಳ ಹಾಜರಾತಿ ತೆಗೆದು ಸುಸ್ತಾದ ಮೇಡಂ

"ಒಬ್ಬೊಬ್ಬರಾಗಿ ಎಲ್ಲರೂ ಮೂರನೇ ಪಾಠ ಓದಿ. ಯಾರಾದ್ರೂ ಸದ್ದು ಮಾಡಿದ್ರೆ ಕೈಗೆ ಹೇಟು ಖಂಡಿತ! ಹೂಂ ಲೇ ನೀಲೇಶ ಮೊದಲ್ನೇ ಪ್ಯಾರಾ ಶುರು ಮಾಡೋ" ಎಂದು ಹೇಳಿ ಎಂದಿನಂತೆ ನಿದ್ದೆ ಮಾಡಲು ಕುರ್ಚಿ ಸರಿ ಮಾಡಿದರು. ನೀಲೇಶ ಎಲ್ಲಿ ತಪ್ಪು ಮಾಡಿ ಹೇಟು ತಿನ್ನಬೇಕೋ ಎಂದು ಹೆದರುತ್ತಲೆ ನೀಲಿಯಾದ. ಪ್ಯಾರಾ ಓದಲು ಶುರು ಮಾಡಿದ. ಆರು ಹುಡುಗರು ಓದಲು ಶುರು ಮಾಡುವಷ್ಟರಲ್ಲೇ ಪಾರ್ವತಿ ಮೇಡಂ ಗೊರಕೆ ಹೊಡೆಯಲು ಶುರು ಮಾಡಿದರು. ಪಠ್ಯ ಓದುತ್ತಿದ್ದ ರೇಖಾ ತಪ್ಪುಗಳ ಮೇಲೆ ತಪ್ಪು ಮಾಡುತ್ತ, ಮೇಡಂ ಗೊರಕೆಗೆ ನಗುತ್ತ ಓದುವುದನ್ನು ಮುಂದುವರೆಸಿದಳು. ತಿಮ್ಮ ತನ್ನ ಹೊಂಚನ್ನು ನಿಜ ಮಾಡಲು ಮುಂದಾದ. ಮೆಲ್ಲಗೆ ಬೆಂಚಿನಿಂದೆದ್ದು, ಪಕ್ಕದಲ್ಲಿದ್ದ ತನ್ನ ಗೆಳೆಯನಿಗೆ ಸುಮ್ಮನಿರಲು ಹೇಳಿ ಮೆಲ್ಲಗೆ ಕ್ಲಾಸಿನ ಹೊರಗೆ ನಡೆದ. ಪಕ್ಕದಲ್ಲಿದ್ದ ಕಕ್ಷೆಯೊಳಗೆ ಕಣ್ಣು ಹಾಯಿಸಿದ. ತನ್ನ ತಂಗಿಯ ಕಕ್ಷೆಯಲ್ಲೂ ಮೇಡಂ ನಿದ್ದೆ ಹೊಡೆಯುತ್ತಿದ್ದನ್ನು ಕಂಡು ಮೆಲ್ಲಗೆ ತಂಗಿಯ ಬಳಿ ನಡೆದ.

"ಮೆಲ್ಲಗೆ ನನ್ನ ಹಿಂದೆ ಬಾ" ಎಂದು ತಂಗಿಯ ಕಿವಿಯಲ್ಲಿ ಪಿಸುಗುಟ್ಟಿದ.

ತಂಗಿ ಅಣ್ಣನ ಮಾತನ್ನು ಶಿರಸಾವಹಿಸಿದಳು.

ಇಬ್ಬರೂ ಹೊರಗೆ ಬಂದರು. ಮೆಲ್ಲಗೆ ಓಡುತ್ತಾ ಶಾಲೆಯ ಆವರಣದೆಡೆಗೆ ಕಣ್ಣು ಹಾಯಿಸಿದರು. ಅಲ್ಲಿ ಯಾರೂ ಇರದದ್ದನ್ನು ಕಂಡು, ಗೇಟು ತೆಗೆದು ಹೊರಗೆ ಓಡಿದರು. ತಿಮ್ಮನಿಗೆ ಭಯ ಸಂತೋಷ ಎರಡೂ. ತಂಗಿಯು ಹೆದರಿ ಅಣ್ಣನ ಕೈಯನ್ನು ಗಟ್ಟಿಗೆ ಹಿಡಿದು ಅವನ ಹೆಜ್ಜೆಗೆ ಹೆಜ್ಜೆ ಹಾಕಿದಳು. ತಿಮ್ಮನು ಮಾಡಿದ ಕೆಲಸದಿಂದ ಕೆಲ ಹುಡುಗರು ಆವಾಕ್ಕಾಗಿ ನೋಡುತ್ತಿದ್ದರೆ ಕೆಲವರು ತಿಮ್ಮನಂತೆ ಕಕ್ಷೆಯಿಂದ ಹೊರ ನಡೆದರು. ಮೇಡಂ ಇವೆಲ್ಲದರ ಅರಿವಿಲ್ಲದೆ ನಿದ್ರಾಲೋಕದಲ್ಲಿ ವಿಹರಿಸುತ್ತಿದ್ದರು.

ತಿಮ್ಮನು ತಂಗಿಯ ಜೊತೆ ಓಡುತ್ತಾ ಮನೆ ತಲುಪಿದ.ಅಂಗಳದ ಗಿಡಗಳಿಗೆ ನೀರು ಹಾಕುತ್ತಿದ್ದ ಅಮ್ಮನ ಬಳಿ ಇಬ್ಬರೂ ಓಡಿದರೂ.

"ಶಾಲೆ ಬೇಗ ಬಿಡ್ತಾ ಇವತ್ತು? ಅದೇನು ಇಷ್ಟು ಬೇಗ ಮನೇಲಿದ್ದೀರಾ ಇಬ್ರೂ?" ಎಂದು ಅಮ್ಮ ಪ್ರಶ್ನಿಸಿದಳು.

"ಅಮ್ಮಾ ಅಮ್ಮಾ ನಮಗೆ ಈ ಶಾಲೆ ಬೇಡ, ಬೇರೆ ಶಾಲೆಗೆ ಹೋಗ್ತೀವಿ, ಇಲ್ಲಾ ವಾಪಸ್ಸು ತುಮ್ಕೂರಿಗೆ ಹೋಗೋಣ!" ಎಂದ ತಿಮ್ಮ ಧೈರ್ಯ ಮಾಡಿ.

ಅಮ್ಮಾ ಕೋಪಗೊಳ್ಳುತ್ತಾ "ಶಾಲೆ ತಪ್ಪಿಸಿ ಬಂದ್ರಾ ನೀವು? ಹಾಂ? ಯಾಕೆ, ಯಾಕೆ ಬೇಡಾ ಈ ಶಾಲೆ. ಇನ್ನೂ ಶುರುವಾಗಿ ಒಂದು ತಿಂಗ್ಳಾಗಿಲ್ಲಾ ಆಗ್ಲೆ ಬೇಡಾ ಅಂತಿದ್ದೀರಾ? " ಎಂದು ಗದರಿಸಿದಳು

ತಂಗಿ ಹೆದರಿ ಅಳುತ್ತಾ "ಅಮ್ಮಾ ಆ ಪಾರ್ವತಿ ಮೇಡಂ ಸರಿಯಿಲ್ಲಮ್ಮಾ! ಹೊಡಿತಾರೆ, ನಂಗೆ ತುಂಬಾ ಭಯ!!" ಎಂದಳು, ತಿಮ್ಮ ತಂಗಿಯ ದನಿಗೆ ದನಿ ಸೇರಿಸುತ್ತಾ

"ಹೂಂ ಅಮ್ಮಾ! ಅಲ್ದೆ ಮೇಡಂ ನಮಗೆ ಪಾಠ ಮಾಡಲ್ಲ, ನಾವೇ ಓದ್ಬೇಕು, ಮೇಡಂ ನಿದ್ದೆ ಮಾಡ್ತಾರೆ. ಅದಕ್ಕೆ ನಾವು ನಿದ್ದೆ ಮಾಡುವಾಗ ಓಡಿ ಬಂದ್ವಿ. ಅಮ್ಮಾ ದಯವಿಟ್ಟು ಬೇರೆ ಶಾಲೆ ಸೇರ್ಸಮ್ಮಾ!"

ಅಮ್ಮ ಕೋಪ ಹಾಗೂ ಇಂತಹ ಶಾಲೆಗೆ ಸೇರಿಸಿದ್ದ ಬೇಸರದಿಂದ

"ಅದಕ್ಕೆ! ಶಾಲೆ ಬಿಟ್ಟು ಬರೋದಾ? ಇದು ಒಳ್ಳೆ ಕೆಲ್ಸಾನಾ? ನಿಮ್ಮಪ್ಪ ಬರ್ಲಿ ಇವತ್ತು ಸಂಜೆ ಮಾತಾಡೋಣ. ಈಗ ನಡೀರಿ ನನ್ನೊತೆ ಶಾಲೆಗೆ ಆ ಮೇಡಂ ಏನ್ಮಾಡ್ತಾ ಇದ್ದಾರೆ ಅಂತ ನೋಡ್ಬೇಕು"

ಇಬ್ಬರು ಹೆದರುತ್ತಲೇ ತುಟಿ ಪಿಟಕ್ಕೆನ್ನದೆ ಅಮ್ಮನ ಸೆರಗು ಹಿಂಬಾಲಿಸಿದರು. ಅಮ್ಮ ಶಾಲೆಯೊಳಗೆ ಸದ್ದಿಲ್ಲದೆ ನಡೆದರು.

"ಎಲ್ಲಿ ನಿಮ್ಮ ಕಕ್ಷೆ, ತೋರ್ಸಿ ನಂಗೆ"

ಭಯದಲ್ಲೇ ಬೆರಳು ಮಾಡಿದರು ಮಕ್ಕಳಿಬ್ಬರೂ. ಅಮ್ಮಾ ನಿದ್ದೆ ಮಾಡುತ್ತಿದ್ದ ಮೇಡಂನ ಕಂಡು ಸಿಟ್ಟಿನಿಂದ

"ರೀ ಮೇಡಂ! ಇದೇನಾ ನೀವು ಮಕ್ಕಳಿಗೆ ಪಾಠ ಮಾಡೋದು? ನಿಮ್ಮನ್ನ ನಂಬಿ ನಾವು ಮಕ್ಕಳ್ನ ಶಾಲೆಗೆ ಕಳ್ಸಿದ್ರೆ, ನೀವು ಇಲ್ಲಿ ನಮ್ಮ ಫೀಸ್ ತಿಂದು ಗೊರಕೆ ಹೊಡೀತಾ ಇದ್ದೀರಾ?"

ಶಾಂತವಾಗಿ ನಿದ್ದೆ ಮಾಡುತ್ತಿದ್ದ ಪಾರ್ವತಿ ಮೇಡಂ ಮುಖದಲ್ಲಿ ಅಶಾಂತಿ ಹಾಗೂ ಭಯ ಕಂಡಿತು. ತಪ್ಪಿಗೆ ಉತ್ತರವಿಲ್ಲದೆ ತಬ್ಬಿಬ್ಬಾಗಿ ನಿಂತರು. ಮಕ್ಕಳೆಲ್ಲರೂ ತಮ್ಮನ್ನು ಹುಲಿಯಾಗಿ ಹೆದರಿಸುತ್ತಿದ್ದ ಮೇಡಂ ಇಲಿಯಂತೆ ಹೆದರುತ್ತಿದ್ದನ್ನು ಕಂಡು ಜೋರಾಗಿ ನಕ್ಕರು. ತಿಮ್ಮ ತಾನು ಮಾಡಿದ ಕೆಲಸಕ್ಕೆ ಹೆಮ್ಮೆಯಿಂದ ತನ್ನ ಬೆನ್ನು ತಟ್ಟುಕೊಂಡ.

"ರೀ ಮೇಡಂ! ನಾಚ್ಕೆ ಆಗ್ಬೇಕು ನಿಮ್ಗೆ. ನನ್ನ ಮಕ್ಕಳ್ಗೆ ನಿಂ ಪಾಠಾನೂ ಬೇಡಾ ನಿಮ್ಸ್ಕೂಲು ಬೇಡಾ!" ಎಂದವರೇ "ನಡೀರಿ, ಮನೆಗೆ!", ಎಂದು ಮಕ್ಕಳನ್ನು ಎಳೆದುಕೊಂಡು ಹೋದರು.

ತಿಮ್ಮ ಸಂತೋಷವಾಗಿ ಮನೆಯೆಡೆಗೆ ನಡೆದ. ಮೇಡಂ ಮಾಡಿದ ತಪ್ಪಿಗೆ ಅವರಿಗೆ ಸರಿಯಾದ ಶಿಕ್ಷೆಯಾಯಿತು, ಇನ್ನು ಈ ಶಾಲೆಗೆ ಬರೋದು ತಪ್ಪಿತು ಎಂದುಕೊಂಡು, ತಾನು ಇಂದು ಒಳ್ಳೆಯ ಹುಡುಗನಾಗಿದ್ದೆ, ದೇವರು ಖಂಡಿತ ಮೆಚ್ಚುವನೆಂದು ಸಂತಸದಿಂದ ನಕ್ಕ. ಮನೆ ತಲುಪಿದ ನಂತರ

"ಅಮ್ಮಾ! ನೀನು ನಿಜವಾಗಿಯೂ ಬೇರೆ ಶಾಲೆಗೆ ಸೇರಿಸುತ್ತೀಯಾ?" ಎಂದು ನಗುತ್ತಲೇ ಕೇಳಿದ.

"ಹೂಂ!, ಈಗ ನೀನು ಓದು, ನಿಮ್ಮಪ್ಪ ಸಂಜೆ ಬಂದ ಮೇಲೆ ಮಾತಾಡೋಣ" ಅಮ್ಮ ಮನೆಗೆಲಸ ಮುಂದುವರಿಸುತ್ತಾ ಹೇಳಿದರು

ಸಂಜೆ ಏಳಾಯಿತು, ಅಪ್ಪ ಮನೆಗೆ ಬಂದೊಡನೆ ಅಮ್ಮ ಅಪ್ಪನಿಗೆ ದಿನದಂದು ನಡೆದ ಕಥೆ ಹೇಳಿದರು. ಅಪ್ಪನಿಗೆ ಮೇಡಂ ಮೇಲೆ ಕೋಪ ಬರುವುದಲ್ಲದೆ, ತಿಮ್ಮನ ಮೇಲೂ ಕೋಪ ಬಂದಿತು, ತಿಮ್ಮ ಹೇಳದೆ ಕೇಳದೆ ಶಾಲೆ ಬಿಟ್ಟು ಬಂದಿದ್ದಕ್ಕೆ ಅಪ್ಪ ತಿಮ್ಮನ ಬೆನ್ನಿಗೆ ಬಾರಿಸಿದ್ದರು. ತಿಮ್ಮನಿಗೆ ತಾನು ಮಾಡಿದ್ದರಲ್ಲಿ ತಪ್ಪಿತ್ತೆಂದು ಅರಿವು ಮೂಡಿಸಿದ್ದರು. ಆದರೆ ತಿಮ್ಮ ತನ್ನ ಧೈರ್ಯದ ಕೆಲಸ ಮಾಡದಿದ್ದಲ್ಲಿ ತಿಮ್ಮನಿಗೆ ಬೇರೆ ಶಾಲೆಗೆ ಸೇರಿಸುತ್ತಿರಲಿಲ್ಲ, ಪಾರ್ವತಿ ಮೇಡಂರ ತಪ್ಪು ಹೊರಬರುತ್ತಿರಲಿಲ್ಲ. ಶಿಕ್ಷಕಿಯಾದ ಆಕೆಗೆ ಶಿಕ್ಷೆಯಾಗಬೇಕಿತ್ತು, ಆಯಿತು,ಆದರೆ ತಾನು ಮಾಡಿದ್ದು ಒಳ್ಳೆಯ ಕೆಲಸ. ತನಗೇಕೆ ಶಿಕ್ಷೆ?

ಹೀಗೆ ಹಲವಾರು ಪ್ರಶ್ನೆಗಳೊಂದಿಗೆ ತಿಮ್ಮ ಹೇಟು ತಿಂದ ಮೇಲೆ ಅಳುತ್ತಾ ಬೇಸರಗೊಂಡನು. ತಾನು ಒಳ್ಳೆಯ ಕೆಲಸ ಮಾಡಿದ್ದಕ್ಕೆ ಶಿಕ್ಷೆಯಾಗಿದ್ದಕ್ಕೆ ದೇವರನ್ನು ನಿಂದಿಸಿದ. ದೇವರು ಒಂದು ರೀತಿಯ ಸಹಾಯ ಮಾಡಿದರೋ ಅಥವಾ ಶಿಕ್ಷೆಯಾಗುವಂತೆ ಮಾಡಿದರೋ ತಿಮ್ಮನಿಗೆ ದ್ವಂದ್ವ ಕಾಡಿತು. ದೇವರು ಇವೆಲ್ಲವನ್ನು ನೋಡಿಯೂ ಸುಮ್ಮನಿರುವನೆ? ಹೀಗೆ ಹಲವು ಪ್ರಶ್ನೆಗಳು ತಿಮ್ಮನ ಪುಟ್ಟ ತಲೆಯಲ್ಲಿ ಮೂಡತೊಡಗಿದವು.

ಹೀಗೆ ಪ್ರಶ್ನೆಗಳು ಬಹಳ! ಈ ಸಂಚಿಕೆಯಿಂದ ನನ್ನೊಡನೆ ದೇವರನ್ನು ಹುಡುಕುವ ಕಾರ್ಯಕ್ಕೆ ನೀವು ಸೇರಬಹುದು. ಮುಂಬರುವ ಸಂಚಿಕೆಗಳಲ್ಲಿ ಗೂಬೆ ತಿಮ್ಮನ ಕಥೆಗಳೊಂದಿಗೆ ತಿಮ್ಮನ ತರ್ಲೆ ಪ್ರಶ್ನೆಗೆ ಉತ್ತರ ಹುಡುಕೋಣ.

# ಸಂಚಿಕೆ ೪ - ಬಿಲ್ಲು-ಬಾಣ

ಅಂದು ಭಾನುವಾರ. ತಿಮ್ಮನಿಗೆ ಹಿಡಿಸಿದ ದಿನ. ಮುಂಜಾನೆ ಬೇಗ ಎದ್ದು ಅಪ್ಪನೊಡನೆ ಹತ್ತಿರದ ಪಾರ್ಕಿಗೆ ಹೋಗುವುದೆಂದರೆ ತಿಮ್ಮ ಹಾಗೂ ಅವನ ತಂಗಿಗೆ ಬಹಳ ಇಷ್ಟ. ಅಪ್ಪ ಪಾರ್ಕಿನಲ್ಲಿ ಬೆಳೆದ ವಿವಿಧ ಗಿಡಮರಗಳ ಬಗ್ಗೆ ತಿಳಿಸುತ್ತಿದ್ದರು. ರೈತರ ಕುಟುಂಬದಿಂದ ಬಂದ ಅಪ್ಪನಿಗೆ ಗಿಡ ಮರಗಳ ಬಗ್ಗೆ ಬಹಳಷ್ಟು ಮಾಹಿತಿಯಿತ್ತು. ಯಾವ ಎಲೆ ತೋರಿಸಿದರೂ ಅದು ಯಾವ ಮರದ ಎಲೆ ಎಂದು ಸಲೀಸಾಗಿ ಹೇಳಿಬಿಡುತ್ತಿದ್ದರು. ಆದರೆ ತಿಮ್ಮನಿಗೆ ಮರಗಳ ಹಣ್ಣಿನ ಬಗ್ಗೆ ಕುತೂಹಲ. ಒಂದೊಂದು ಮರವೂ ಒಂದೊಂದು ರೀತಿಯಲ್ಲಿ ವಿವಿಧತೆಯನ್ನು ಅಳವಡಿಸಿದ್ದು ತಿಮ್ಮನ ಕುತೂಹಲವನ್ನು ಕೆರಳಿಸಿತ್ತು.

“ಎಲ್ಲಾ ಮರಗಳು ಒಂದೇ ರೀತಿಯಾಕಿಲ್ಲ? ಒಂದು ಮರದಲ್ಲಿ ಮಾವಿನ ಹಣ್ಣಿನಂಥಾ ಸಿಹಿಯಾದ ರುಚಿಯಾದ ಹಣ್ಣು ಬೆಳೆದರೆ, ಇನ್ನೊಂದರಲ್ಲಿ ಹುಳಿ ಹುಣಿಸೆಹಣ್ಣು ಬೆಳೆಯುವುದು ಏಕೆ? ಒಂದು ಹಣ್ಣು ಚಿಕ್ಕದಾಗಿದ್ದರೆ, ಒಂದು ದೊಡ್ಡದೇಕೆ? ಹುಣಿಸೆ ಮರದಲ್ಲಿ ಮಾತ್ರ ದೆವ್ವಗಳು ಏಕೆ ಕೂರುತ್ತವೆ? ದೆವ್ವಗಳಿಗೆ ಹುಣಿಸೆ ಹಣ್ಣು ಇಷ್ಟವಾಗುತ್ತವೆಯೆ? ದೇವರು ಕೂರುವ ಮರಗಳೂ ಇವೆಯೆ?”

ಹೀಗೆ ಹಲವಾರು ಪ್ರಶ್ನೆಗಳು. ಇಂತಹ ಪ್ರಷ್ನೆಗಳಿಗೆ ಉತ್ತರ ಕೇಳುತ್ತ ಎಷ್ಟೋ ಬಾರಿ ಅಪ್ಪನ ತಾಳ್ಮೆ ತೀರಿಸಿದ್ದ ತಿಮ್ಮ. ಅಪ್ಪ ತಿಳಿದಷ್ಟು ಹೇಳುತ್ತಿದ್ದರು. ಉಳಿದದ್ದು,

“ಬಹಳ ವರ್ಷಗಳಿಂದ ಹರಿದು ಬಂದ ಪದ್ದತಿ ಹಾಗೂ ಗಾದೆಗಳು ಅವನ್ನು ಪ್ರಶ್ನಿಸಬಾರದು” ಎಂದು ತಿಮ್ಮನನ್ನು ಸುಮ್ಮನಾಗಿಸಲು ಪ್ರಯತ್ನಿಸುತ್ತಿದ್ದರು.

“ಯಾಕೆ ಪ್ರಶ್ನಿಸಬಾರದು?” ಎಂಬ ಮರು ಪ್ರಶ್ನೆ ತಿಮ್ಮನದ್ದು.

”ನಿನಗೆ ಆಮೇಲೆ ಹೇಳ್ತೀನಿ, ಈಗ ಬೇಗ ನಡೀರಿ ಮನೆಗೆ ಹೋಗೋಣ. ಇನ್ನೇನು ಮಹಾಭಾರತ ಶುರುವಾಗೋ ಸಮಯ ಬಂತು” ಎಂದು ತಿಮ್ಮನ ಆಸಕ್ತಿಯನ್ನು ಬೇರೆಡೆಗೆ ಹರಿಸಿದರು ಅಪ್ಪ.

”ಹೈ! ಮಹಾಭಾರತ!! ಮರ್ತೆ ಹೋಗಿತ್ತು ಅಪ್ಪ ನಂಗೆ. ಕಳೆದ ವಾರ ಯುದ್ಧ ಶುರುವಾಗತ್ತೆ ಅಂದಿದ್ದೆ. ಇವತ್ತು ಯುದ್ಧ ಇರುತ್ತಾ. ಭೀಮ ಅರ್ಜುನ ಗೆಲ್ತಾರಾ?” ಎಂದು ತನಗೆ ಹಿಡಿಸಿದ ಮಹಾಭಾರತದ ಪಾಂಡವರ ಬಗ್ಗೆ ಕುತೂಹಲದಿಂದ ಕೇಳಿದ ತಿಮ್ಮ.

“ಮಹಾಭಾರತ ಯುದ್ಧ, ದೊಡ್ಡ ಯುದ್ಧ. ಬಹಳ ದಿನಗಳು ನಡೆಯಿತು. ಟಿ.ವಿ. ಯಲ್ಲಿ ಇನ್ನೂ ಬಹಳಷ್ಟು ದಿನ ನಡೆಯತ್ತೆ. ನೀನೇ ನೋಡುವೆ” ಎಂದು ಮಹಾಭಾರತದ ಬಗ್ಗೆ ತಿಳಿದ ಅಪ್ಪ ಅಷ್ಟೆ ಉತ್ಸಾಹದಿಂದ ಉತ್ತರಿಸಿದರು.

ಸರಿಯೆಂದು ಮಕ್ಕಳಿಬ್ಬರೂ ಅಪ್ಪನ ಹೆಜ್ಜೆಗೆ ತಮ್ಮ ಪುಟ್ಟ ಪುಟ್ಟ ಹೆಜ್ಜೆಗಳನ್ನು ಸೇರಿಸಿದರು.

ಅಮ್ಮ ಸಂಡೇ ಸ್ಪೆಷಲ್ಲೆಂದು ಮಾಡಿದ್ದ ಇಡ್ಲಿ ಚಟ್ನಿ ತಿಂದು ಮಕ್ಕಳಿಬ್ಬರೂ ಟಿ.ವಿ ಮುಂದೆ ಕುಳಿತು ಮಹಾಭಾರತವನ್ನು ತಮಗೆ ತಿಳಿದ ಅಲ್ಪ ಸ್ವಲ್ಪ ಹಿಂದಿಯಿಂದ ಅರ್ಥಮಾಡಿಕೊಳ್ಳಲು ಕುಳಿತರು. ತಿಮ್ಮನ ಕುತೂಹಲ ಹಾಗೂ ಸಂತಸಕ್ಕೆ ತಕ್ಕಂತೆ ಮಹಾಭಾರತ ಅವನ ಮನ ಸೆಳೆದಿತ್ತು. ಭೀಮನ ಶಕ್ತಿ, ಹಾಗೂ ಅರ್ಜುನನ ಬಿಲ್ವಿದ್ಯೆ ತಿಮ್ಮನಿಗೆ ಬಹಳ ಹಿಡಿಸಿತ್ತು. ಅರ್ಜುನ ಕಣ್ಣು ಮುಚ್ಚಿ ತನ್ನ ಬಿಲ್ಲನ್ನು ನೆತ್ತಿಯ ಬಳಿ ತಂದು ಒಮ್ಮೆ "ಓಂ ಬ್ರಹ್ಮದೇವಾಯ ನಮಹ" ಎಂದು ಪ್ರಾರ್ಥಿಸಿ ಬಿಲ್ಲಿಗೆ ಬಾಣವನ್ನು ಸೇರಿಸಿ ಬಾಣವನ್ನು ಶತ್ರುವಿನೆಡೆಗೆ ಬೀಸಿದ್ದ. ಬಾಣವು ಸುಂಯೆಂದು ಹಾರುತ್ತ ನಡುದಾರಿಯಲ್ಲಿ ಸುರ್ ಸುರ್ ಬತ್ತಿಯಂತೆ ಬೆಳಗುತ್ತ ಶತ್ರುವನ್ನು ಹೆದರಿಸಿ ಕೊಂದಿತ್ತು. ಅರ್ಜುನ ಹಾಗು ಗೋಪಾಲ ಮಂದಹಾಸ ಬೀರಿದರು. ತಿಮ್ಮ ಬಾಯಿಬಿಟ್ಟು ತನ್ನ ಜಗತ್ತನ್ನು ಮರೆತು ಮಹಾಭಾರತದ ಪಾತ್ರದೊಳಗೆ ಪಾತ್ರವಾಗಿದ್ದನು. ಅರ್ಜುನನ ವಿವಿಧ ಬೆಳಕಿನ ಆಟದ ಬಾಣಗಳು, ಸರ್ಪಾಸ್ತ್ರಗಳು, ಬ್ರಹ್ಮಾಸ್ತ್ರಗಳು ತಿಮ್ಮನಿಗೆ ಅತಿಯಾಗಿ ಹಿಡಿಸಿದ್ದವು. ತಾನೂ ಅರ್ಜುನನಂತಾಗಬೇಕೆಂಬ ಬಯಕೆ ಬರಲು ತಿಮ್ಮನಿಗೆ ಬಹಳ ಹೊತ್ತು ತೆಗೆದುಕೊಳ್ಳಲಿಲ್ಲ. ಮಹಾಭಾರತ ಮುಗಿದ ಕೂಡಲೆ,

"ಅಪ್ಪಾ ನನಗೂ ಬಿಲ್ಲು ಬಾಣ ಬೇಕು. ಎಲ್ಲಿ ಸಿಗತ್ತೆ?" ಎಂದು ಮುಗ್ಧನಾಗಿ ಕೇಳಿದ.

"ಅಷ್ಟೇ ತಾನೆ? ಬಿಲ್ಲು ಬಾಣ ಎಲ್ಲೂ ಸಿಗೊಲ್ಲ ಇಲ್ಲಿ. ನಾನೇ ಒಂದು ಮಾಡಿಕೊಳ್ಳುವ ವಿಧಾನ ಹೇಳ್ತೀನಿ. ಆದರೆ ಬಾಣ ಯಾರ ಮೇಲೂ ಬೀಸಕೂಡದು" ಎಂದರು.

"ಅರ್ಜುನ ಬೀಸ್ತಾನೆ ನಾನ್ಯಾಕೆ ಬೀಸ್ಬಾರದು?" ಠಕ್ಕನೆ ಕೇಳಿದ ತಿಮ್ಮ.

"ನೀನೇ ನೋಡಿದ ಹಾಗೆ ಅರ್ಜುನ ಕೆಟ್ಟವರ ಮೇಲೆ ಮಾತ್ರ ಬಾಣ ಬೀಸಿದ ತಾನೆ? ಇಲ್ಲಿ ಬೀಸಿದರೆ ಯಾರಿಗಾದರೂ ನೋವಾದೀತು.ಒಳ್ಳೆಯದಲ್ಲ. ಹೋಗಿ ಬಚ್ಚಲ ಮನೆಯಿಂದ ಕಡ್ಡಿ ಪೊರಕೆ ತೆಗೊಂಡ್ಬಾ, ನಿಂಗೊಂದು ಬಿಲ್ಲು ಮಾಡಿಕೊಡ್ತೀನಿ" ಎಂದು ತಾಳ್ಮೆಯಿಂದ ಅರ್ಥೈಸಿದರು ಅಪ್ಪ.

ತಿಮ್ಮ ಓಡಿ ಪೊರಕೆ ತಂದ. ಅಪ್ಪ ಪೊರಕೆಯಿಂದ ಕಡ್ಡಿಯನ್ನು ತೆಗೆದು. ಅದಕ್ಕೆ ದಾರವನ್ನು ಕಟ್ಟಿ ಐದು ನಿಮಿಷದೊಳಗೊಂದು ಬಾಣ ತಯಾರು ಮಾಡಿಕೊಟ್ಟರು ತಿಮ್ಮನಿಗೆ. "ಬಾಣಕ್ಕೆ ಒಂದೆರೆಡು ಕಡ್ಡಿ ತಗೋ" ಎಂದು ಹೇಳಿ ಸಂತೆ ಮಾಡಲು ಹೊರಟರು.

ತಿಮ್ಮ ತನ್ನ ಹೊಸ ಬಿಲ್ಲು ಬಾಣದಿಂದ ಸಂತಸಗೊಂಡು ಅದರೊಡನೆ ಆಡಲು ಶುರುಮಾಡಿದ. ಮನೆಯಂಗಳಕ್ಕೆ ಹೋಗಿ ಗೋಡೆಯ ಮೇಲೆ ಒಬ್ಬ ರಾಕ್ಷಸನಂತೆ ಕಾಣುವ ಮುಖವನ್ನು ಚಿತ್ರಿಸಿದ. ನಂತರ ಕೊಂಚ ದೂರ ನಡೆದು. ತನ್ನ ಹೊಸ ಬಿಲ್ಲಿಗೆ ಒಂದು ಕಡ್ಡಿಯನ್ನು ಬಾಣವಾಗಿ ಮಾಡಿ ರಾಕ್ಷಸನೆಡೆಗೆ ಬೀಸಿದ. ಕಡ್ಡಿ ಸುಂಯನೆ ಹಾರಿ ರಾಕ್ಷಸನ ಮುಖದ ಬಳಿ ಬಿದ್ದಿತು. ತಿಮ್ಮ ತನ್ನ ಬಿಲ್ವಿದ್ಯೆಯಿಂದ ಸಂತಸಗೊಂಡು ಇನ್ನಷ್ಟು ಹೊತ್ತು ತನ್ನ ಬಿಲ್ಲು ಬಾಣದೊಡನೆ ಆಟವಾಡಿದ.

ತಿಮ್ಮನಿಗೆ ತನ್ನ ಹೊಸ ಆಟದ ಸಾಮಗ್ರಿಯ ಬಗ್ಗೆ ಕೂಡಲೆ ಬೇಸರ ಮೂಡಿತು. ಗೋಡೆಯ ರಾಕ್ಷಸನ ಮೇಲೆ ಬಾಣ ಬೀಸುವುದು ತಿಮ್ಮನಿಗೆ ಬೇಸರ ಮೂಡಿಸಿತ್ತು. ತಿಮ್ಮ ಬಿಲ್ಲು ಬಾಣವನ್ನು ಬದಿಗಿಟ್ಟು ತನ್ನ ಚೆಂಡಿನೊಡನ ಆಡಲು ಹೊರಗೆ ಓಡಿದ.

ತನ್ನ ಚೆಂಡನ್ನು ಆಕಾಶದೆಡೆಗೆ ಹಾರಿಸುತ್ತಾ ಅದು ಬೀಳುವ ದಿಕ್ಕಿಗೆ ಅದನ್ನು ಹಿಡಿಯಲು ಓಡಿದ ತಿಮ್ಮ. ಒಬ್ಬನೆ ಚೆಂಡಿನೊಡನೆ ಆಡಲು ತಿಮ್ಮ ಹೀಗೆ ಕಲಿತಿದ್ದ. ಹಾಗೆ ಚೆಂಡು ಎಸೆಯುತ್ತಾ ಆಡುತ್ತಿದ್ದಂತೆ ಒಮ್ಮೆ ಚೆಂಡನ್ನು ಮೇಲಕ್ಕೆಸೆದಾಗ ಚೆಂಡು ಹಾರಿ ಎದುರು

ಮನೆಯವರಂಗಳದಲ್ಲಿ ಬಿದ್ದಿತ್ತು. ಅಂಗಳದಲ್ಲಾದ ಶಬ್ದ ಕೇಳಿ ಮನೆಯೊಳಗಿದ್ದ ಡುಮ್ಮ ವಾಸು ಹೊರಗೆ ಓಡಿ ಬಂದ. ತಿಮ್ಮನಿಗೆ ಭಯವಾಯಿತು.

ಆ ಮನೆಯಲ್ಲಿ ಸುಮಾರು ಹದಿನೈದು ವರ್ಷದ ಹುಡುಗ ವಾಸುವಾಗಿದ್ದ. ದಪ್ಪನೆಯ ಮೈಕಟ್ಟು ಅವನದ್ದು. ಅದಕ್ಕಾಗಿ ಎಲ್ಲರೂ ಅವನನ್ನು ಡುಮ್ಮ ವಾಸು ಎಂದು ಅವನ ಹೆಸರಿಗೆ ಹೊಸ ಹೆಸರು ಕೊಟ್ಟಿದ್ದರು. ಹೆಚ್ಚಾಗಿ ಅವನು ಹೊರಗೆ ಬರುತ್ತಿರಲಿಲ್ಲ. ಯಾರೊಡನೆಯೂ ಆಡುತ್ತಿರಲಿಲ್ಲ. ಅವನಿಗೆ ಎಲ್ಲರನ್ನು ಕಂಡರೆ ಕೋಪ. ಕಾರಣ ಅವನಿಗೆ ಅವರು ಇಟ್ಟ ಹೆಸರು. ತನಗಿಂತ ಚಿಕ್ಕವರನ್ನು ಹೆದರಿಸುತ್ತಿದ್ದ ವಾಸು. ತಿಮ್ಮ ತನ್ನ ಚೆಂಡನ್ನು ಪಡೆಯಲು ಹೆದರುತ್ತಲೇ ವಾಸುವಿನ ಮನೆಯೆಡೆಗೆ ನಡೆದ. ಚೆಂಡು ಗೇಟಿನ ಬಳಿಯೇ ಇದ್ದಿತು. ಠಕ್ಕನೆ ತೆಗೆದುಕೊಳ್ಳಲು ತಿಮ್ಮ ಮುಂದಾದ. ಡುಮ್ಮ ವಾಸು ಓಡಿ ಬಂದವನೆ ಚೆಂಡನ್ನು ತೆಗೆದುಕೊಂಡ.

“ಏನೋ, ನಮ್ಮನೆಯೊಳಗೆ ಚೆಂಡು ಬೀಸಾಕ್ತಿಯಾ? ಕೊಡಲ್ಲ ಹೋಗು. ನಿನಗಿದು ಸಿಕ್ಕ ಹಂಗೆ!” ಎಂದು ಹೀಯಾಳಿಸಿದ.

“ಇನ್ನೊಂದಸಾರ್ತಿ ಹಾಕಲ್ಲ, ಕೊಡೋ ಡುಮ್ಮ ವಾಸು” ಎಂದು ತಿಮ್ಮ ಕೇಳಿಕೊಂಡ

“ಹಾಂ! ಡುಮ್ಮ ಅಂತೀಯಾ, ಎಷ್ಟು ಕೊಬ್ಬು ನಿಂಗೆ! ಕೊಡಲ್ಲ, ಅದೇನ್ ಮಾಡ್ತೀಯೋ ಮಾಡ್ಕೋ ಹೋಗು” ಎಂದು ಗದರಿಸಿದ.

ತಿಮ್ಮನಿಗೆ ಬೇಸರ ಸಿಟ್ಟು ಎರಡು ಮಿಶ್ರವಾಗಿ “ನೀನು ಕೊಡ್ಲಿಲ್ಲಾ ಅಂದ್ರೆ, ನಿನ್ಮೇಲೆ ಅರ್ಜುನನಂತೆ ಬಾಣ ಬಿಡ್ತೀನಿ. ಆವಾಗ ನಿಂಗೆ ಗಾಯವಾಗುತ್ತೆ. ಗಾಯ ಬೇಡಾ ಅಂದ್ರೆ ಚೆಂಡು ಕೊಡೋ” ಎಂದು ಕೋಪ ಮಿಶ್ರಿತ ದನಿಯಲ್ಲಿ ತಿಮ್ಮ ಕಿರುಚಿದ.

“ನಂಗೂ ಬಾಣ ಬಿಡಾಕೆ ಬರತ್ತೆ! ನಾನು ನಿನ್ಮೇಲೆ ಬಾಣ ಬಿಡ್ತೀನಿ” ನಗುತ್ತಾ ಡುಮ್ಮ ವಾಸು ತಿಮ್ಮನನ್ನು ಹೀಯಾಳಿಸಿದ.

ಡುಮ್ಮ ವಾಸು ತಿಮ್ಮನಿಗೆ ಕೆಟ್ಟ ರಾಕ್ಷಸನಂತೆ ಕಂಡ. ಇವನಿಗೆ ಬುದ್ಧಿ ಕಲಿಸಲೇಬೇಕೆಂದು ನಿರ್ಧರಿಸಿದ.

“ಹೌದಾ! ಹಾಗಾದರೆ ಯುದ್ಧವಾಗ್ಲಿ. ನಾನು ಗೆದ್ರೆ ನನ್ನ ಚೆಂಡು ವಾಪಸ್ಸು ಕೊಟ್ಟು ಇನ್ನೊಮ್ಮೆ ನಂಗೆ ತೊಂದ್ರೆ ಕೊಡ್ಬಾರ್ದು, ನೀನು ಗೆದ್ರೆ ನನ್ನ ಚೆಂಡು ನಿಂದು” ಎಂದು ಧೃಡವಾಗಿ ಹೇಳಿದ ತಿಮ್ಮ.

“ಆಗ್ಲಿ” ಎಂದವನೆ, ಬಿಲ್ಲು ಬಾಣ ಮಾಡಲು ಮನೆಯೊಳಗೆ ಓಡಿದ ಡುಮ್ಮ ವಾಸು.

“ಸರಿ” ಎಂದು ತಿಮ್ಮನೂ ಮನೆಯಂಗಳಕ್ಕೆ ಓಡಿದ. ತಿಮ್ಮ ತನ್ನ ಬಿಲ್ಲು ತೆಗೆದು, ಸುಮಾರು ಇಪ್ಪತ್ತು ಕಡ್ಡಿಗಳನ್ನು ಬಾಣಗಳಾಗಿ ತೆಗೆದುಕೊಂಡು ಹೊರ ನಡೆದನು. ಡುಮ್ಮ ವಾಸು ಆಗಲೇ ತನ್ನ ಬಿಲ್ಲನ್ನು ಸಿದ್ದಪಡಿಸಿದ್ದನು. ಅವನು ಬಿಲ್ಲಿಗೆ ದಾರದ ಬದಲು ರಬ್ಬರ ಬ್ಯಾಂಡ್ ಬಳಸಿದ್ದನು. ತಿಮ್ಮ ವಾಸುವನ್ನು ನೋಡಿದಾಗ ಅವನು ಬಾಣವನ್ನು ತಯಾರು ಮಾಡುತ್ತಿದ್ದನು. ಒಂದು ಕಡ್ಡಿಯನ್ನು ತೆಗೆದೆಕೊಂಡು ಅಂಗಳದ ಹೊರಗಿದ್ದ ಕಲ್ಲಿನ ಮೇಲೆ ಮಸೆಯುತ್ತಿದ್ದನು. ತಿಮ್ಮನಿಗೆ ವಾಸು ಕೇವಲ ಒಂದು ಬಾಣವಿರುವುದನ್ನು ನೋಡಿ.

ತನಗೆ ಜಯ ಖಂಡಿತ ಎಂದುಕೊಂಡನು. ವಾಸು ಕಡ್ಡಿಯನ್ನು ಚೂಪಾಗಿ ಮಸೆಯುತ್ತಿದ್ದದ್ದು ತಿಮ್ಮನಿಗೆ ಅರ್ಥವಾಗಲಿಲ್ಲ. ತಿಮ್ಮ ತನ್ನ ಬಾಣಗಳನ್ನು ಒಟ್ಟಿಗೆ ಸೇರಿಸಿ, ದೇವರನ್ನು ಒಮ್ಮೆ ಮನಸ್ಸಿನಲ್ಲಿಯೇ ಬೇಡಿಕೊಂಡನು.

"ದೇವ್ರೆ, ಇವತ್ತು ಈ ವಾಸುಗೆ ನಾನು ಬುದ್ಧಿ ಕಲಿಸ್ಲೇಬೇಕು. ಇದು ನನ್ನ ಮೂರನೆ ಚೆಂಡು ಅವನು ವಾಪಸ್ ಕೊಡುತ್ತಿಲ್ಲ. ಅವನು ಕೆಟ್ಟವನು. ನಾನು ಅವನಿಗೆ ಏನೂ ಮಾಡಿಲ್ಲ. ನನಗೆ ಅರ್ಜುನನಂತೆ ಶಕ್ತಿ ಕೊಡು"

ತನ್ನ ಬಾಣವನ್ನು ಚೂಪಾಗಿಸಿದ ವಾಸು, ಯುದ್ಧಕ್ಕೆ ತಯಾರಾದ. "ಸರಿ ತಿಮ್ಮ. ನೀನು ಚಿಕ್ಕವನಾದ್ದರಿಂದ ನೀನೇ ಮೊದ್ಲು ಶುರು ಮಾಡು. ನಾನು ನೀನು ಬಾಣ ಬೀಸಿದ ನಂತರ ನನ್ನ ಬ್ರಹ್ಮಾಸ್ತ್ರ ನಿನ್ನ ಮೇಲೆ ಬೀಸ್ತೀನಿ" ಎಂದು ಹತ್ತು ಅಡಿ ದೂರದಲ್ಲಿ ರಸ್ತೆ ಬದಿಗೆ ನಿಂತ ತಿಮ್ಮನಿಗೆ ಹೇಳಿದ.

"ಸರಿ. ನೀನು ಬ್ರಹ್ಮಾಸ್ತ್ರ ಬೀಸೋ ಮೊದ್ಲೆ ನಾನು ದೇವ್ರಲ್ಲಿ ಬೇಡ್ಕೊಂಡಿದಿನಿ. ನಾನೇ ನಿನ್ಮೇಲೆ ಬ್ರಹ್ಮಾಸ್ತ್ರ ಬಿಡ್ತೀನಿ." ಎಂದವನೆ ತಿಮ್ಮ ಅರ್ಜುನನಂತೆ ಬಿಲ್ಲನ್ನು ನೆತ್ತಿಗೆ ಹಿಡಿದು ಕಣ್ಣು ಮುಚ್ಚಿ ಬ್ರಹ್ಮ ದೇವನನ್ನು ಪ್ರಾರ್ಥಿಸಿದ.

"ಹಾ ಹಾ" ಎಂದು ಕುಹಕವಾಗಿ ನಕ್ಕ ಡುಮ್ಮ ವಾಸು.

"ಓಂ ಬ್ರಹ್ಮದೇವಾಯ ನಮಹ!" ಎಂದವನೆ ತಿಮ್ಮ ತನ್ನ ಬಿಲ್ಲಿಗೆ ಬಾಣವನ್ನು ಸೇರಿಸಿ, ರಾಕ್ಷಸನಂತೆ ಕಂಡ ಡುಮ್ಮ ವಾಸುವಿನೆಡೆಗೆ ಬಾಣವನ್ನು ಬೀಸಿದ. ಬಾಣವೂ ಸೀದಾ ವಾಸುವಿನೆಡೆಗೆ ಹಾರಿತು. ಆದರೆ ವಾಸುವನ್ನು ಮುಟ್ಟದೆ ಅವನ ಕಾಲಿನ ಬಳಿ ಬಿದ್ದಿತು. ವಾಸು ಇನ್ನೂ ಜೋರಾಗಿ ನಕ್ಕ.

"ನಿನ್ ಬ್ರಹ್ಮಾಸ್ತ್ರ ಟುಸ್! ಈಗ ನಾನ್ ಬೀಸ್ತೀನಿ" ಜೋರಾಗಿ ನಗುತ್ತಲೆಂದ ಡುಮ್ಮ ವಾಸು.

ತಿಮ್ಮನಿಗೆ ಬ್ರಹ್ಮ ದೇವರ ಕೃಪೆಯಿಲ್ಲದ್ದನ್ನು ಕಂಡು ಬೇಸರವಾಯಿತು. ಇನ್ನೊಮ್ಮೆ ಯತ್ನಿಸುವುದಾಗಿ ಯೋಚಿಸಿ, ದೇವರನ್ನು ನೆನೆಸುತ್ತಾ ವಾಸುವಿನ ಬಾಣಕ್ಕೆ ಕಾದ ತಿಮ್ಮ. ವಾಸು ಬಾಣವನ್ನು ತನ್ನ ಬಿಲ್ಲಿಗೇರಿಸಿ,

"ಮುಗಿತು ನಿನ್ನಕಥೆ" ಎಂದು ಬಾಣವನ್ನು ತಿಮ್ಮನೆಡೆಗೆ ಬೀಸಿದ. ಬಾಣವು ಸುಂಯೆಂದು ಹಾರಿ ತಿಮ್ಮನೆಡೆಗೆ ರಭಸದಿಂದ ಸಾಗಿತು. ಏನಾಗುತ್ತಿದೆ ಎಂದು ಯೋಚಿಸುತ್ತಿರುವಾಗಲೇ ಬಾಣವು ತಿಮ್ಮನ ಬಲಗೈಗೆ ಚುಚ್ಚಿತ್ತು. ತಿಮ್ಮ ನೋವಿನಿಂದ ಅರಚುತ್ತಾ "ರಾಕ್ಷಸ!" ಎಂದು ವಾಸುವನ್ನು ನಿಂದಿಸುತ್ತಾ, ಬಿಲ್ಲು ಬಾಣಗಳನ್ನು ಬಿಟ್ಟು ರಕ್ತ ಬರುತ್ತಿದ್ದ ತನ್ನ ಬಲಗೈಯನ್ನು ಹಿಡಿದು ಮನೆಯೊಳಗೆ ಅಳುತ್ತಾ ಓಡಿದನು.

"ಅಮ್ಮಾ! ಅಮ್ಮಾ! ಡುಮ್ಮ ವಾಸು ನಂಗೆ ಗಾಯ ಮಾಡಿದ" ಎಂದು ಅಳುತ್ತಾ ಅಮ್ಮನಿಗೆ ತನ್ನ ಬಲಗೈ ತೋರಿಸಿದ.

# ದೇವರು ಮತ್ತು ನಾನು

“ಅಯ್ಯೋ ದೇವರೆ! ಏನೋ ಇದು. ಕಡ್ಡಿ ಚುಚ್ಚಿದ್ದಾನೆ. ಯಾಕೆ ಹೀಗೆ ಮಾಡ್ತಾ ಅವ್ನು. ನೀನೇನ್ ಮಾಡ್ದೆ” ಎಂದು ಕಡ್ಡಿ ತೆಗೆದು ಗಾಯವನ್ನು ನೋಡುತ್ತಾ ಅಮ್ಮ ಕೇಳಿದಳು. ತಿಮ್ಮ ನಡೆದ ಘಟನೆಯನ್ನು ಅಮ್ಮನಿಗೆ ತಿಳಿಸಿದ. ಅಮ್ಮ ತಿಮ್ಮನನ್ನು ಅಡುಗೆ ಮನೆಗೆ ಕರೆತಂದು ಗಾಯಕ್ಕೆ ಒಂದು ಬ್ಯಾಂಡೇಯ್ಡ್ ಹಚ್ಚಿದರು.

“ನಡಿ ಆ ವಾಸುಗೆ ನಾನು ಬಯ್ತೀನಿ. ತಲೆ ಇಲ್ದೆ ಇಂಥಾ ಕೆಲ್ಸಾ ಮಾಡಿದಾನಲ್ಲಾ ಅವ್ನು” ಎಂದು ವಾಸುವನ್ನು ನಿಂದಿಸುತ್ತಾ, ತಿಮ್ಮನನ್ನು ಮನೆಯ ಹೊರಗೆ ಕರೆತಂದಳು ಅಮ್ಮ. ವಾಸು ಅಲ್ಲಿಂದ ಆಗಲೇ ಪರಾರಿಯಾಗಿದ್ದ. ಅಮ್ಮ ವಾಸುವಿನ ಮನೆಯೊಳಗೆ ನುಗ್ಗಿ ವಾಸುವಿನ ಅಮ್ಮನಿಗೆ ಅವನು ಮಾಡಿದ ಕೆಲಸವನ್ನು ಹೇಳಿದರು. ವಾಸುವಿನ ಅಮ್ಮ ವಾಸುವಿಗೆ ಚನ್ನಾಗಿ ಬಯ್ದು ತಿಮ್ಮನ ಚೆಂಡನ್ನು ಅವನಿಗೆ ವಾಪಸ್ಸು ಕೊಡುವಂತೆ ಮಾಡಿದರು. ತಿಮ್ಮ ಚೆಂಡು ವಾಪಸ್ಸು ಪಡೆದ ಸಂತೋಷದಲ್ಲಿ ಗಾಯದ ನೋವನ್ನು ಮರೆತನು.

ಆದರೆ, ಕೆಟ್ಟವನಾದ ಡುಮ್ಮ ವಾಸುವಿನ ಬ್ರಹ್ಮಾಸ್ತ್ರ ತನಗೆ ಗಾಯ ಏಕೆ ಮಾಡಿತು? ತಾನು ಒಳ್ಳೆಯನಾಗಿದ್ದರೂ ದೇವರು ಏಕೆ ತನ್ನೊಡನೆಯಿರಲಿಲ್ಲ? ಡುಮ್ಮ ವಾಸುವಿಗೆ ಅವರ ಅಮ್ಮ ಬಯ್ದರೂ ಅವನಿಗೆ ಇನ್ನೂ ಹೆಚ್ಚಿನ ಶಿಕ್ಷೆಯಾಗಬೇಕಿತ್ತು. ತಾನು ಅರ್ಜುನನಂತೆ ರಾಕ್ಷಸರಿಗೆ ಶಿಕ್ಷೆಕೊಡಲು ಏಕೆ ಸಾಧ್ಯವಾಗಲಿಲ್ಲ? ಅಪ್ಪ ಹೇಳಿದ ಹಾಗೆ ಅವನು ಕೆಟ್ಟವನು, ಅವನ ಮೇಲೇ ಬಾಣ ಬೀಸುವುದರಲ್ಲಿ ತಪ್ಪಿಲ್ಲದಿದ್ದರೂ ಶಿಕ್ಷೆ ತನಗೇಕಾಯಿತು? ಹೀಗೆ ಹತ್ತು ಹಲವಾರು ಪ್ರಷ್ನೆಗಳು ತಿಮ್ಮನಲ್ಲಿ ಮೂಡತೊಡಗಿದವು. ತನ್ನ ಚೆಂಡಿನೆಡೆಗೆ ತನ್ನ ಗಮನವನ್ನು ಹರಿಸಿದ.

ದೇವರು ಕೆಟ್ಟವರಿಗೆ ಸಹಾಯ ಮಾಡುತ್ತಾರಾ? ಅಥವಾ ದೇವರು ಎಲ್ಲರ ಪ್ರಾರ್ಥನೆಗೂ ಸಹಾಯ ಮಾಡುತ್ತಾರಾ? ಯಾರು ಸರಿ? ಯಾರು ತಪ್ಪು? ಅದು ಹೇಗೆ ತಿಳಿಯುವುದು. ತಿಮ್ಮನಿಗೆ ಸರಿ ತಪ್ಪಿನ ತಕ್ಕಡಿ ಸಮಸ್ಯೆ ಪರಿಹರಿಸಲು ಸಾಧ್ಯವಾಗಲಿಲ್ಲ. ಇವುಗಳಿಗೆ ನಮ್ಮಲ್ಲಿ ಉತ್ತರಗಳಿವೆಯೇ? ಅಥವಾ ನಮ್ಮ ಉತ್ತರಗಳೂ ಪ್ರಶ್ನೆಗಳೇ? ಹೀಗೆ ಪ್ರಶ್ನೆಗಳು ಬಹಳ! ಈ ಸಂಚಿಕೆಯಿಂದ ನನ್ನೊಡನೆ ದೇವರನ್ನು ಹುಡುಕುವ ಕಾರ್ಯಕ್ಕೆ ನೀವು ಸೇರಬಹುದು. ಮುಂಬರುವ ಸಂಚಿಕೆಗಳಲ್ಲಿ ಗೂಬೆ ತಿಮ್ಮನ ಕಥೆಗಳೊಂದಿಗೆ ತಿಮ್ಮನ ತರ್ಲೆ ಪ್ರಶ್ನೆಗೆ ಉತ್ತರ ಹುಡುಕೋಣ.

# ಸಂಚಿಕೆ ೫ - ನಾಯಿನಾರಾಯಣ

ದಿನವಿಡೀ ಶಾಲೆಯಲ್ಲಿ ಪಾಠ ಕೇಳಿ ದಣಿದಿದ್ದ ತಿಮ್ಮ ಮನೆಯೆಡೆಗೆ ದಾಪಗಾಲು ಹಾಕುತ್ತ ನಡೆದ. ಸಂದಿ ಪಂದಿಗಳಲ್ಲಿ ಓಡಾಡುತ್ತ ಮನೆಯೆಡೆಗೆ ಹೋಗುವುದು ತಿಮ್ಮನಿಗೆ ಇಷ್ಟ. ದಿನವೂ ಒಂದು ಹೊಸ ದಾರಿಯಲ್ಲಿ ಹೋಗಿಬರುತ್ತಿದ್ದ ತಿಮ್ಮ. ಇಂದು ಬೇಗ ಮನೆ ಸೇರಲು ಹತ್ತಿರದ ದಾರಿಯನ್ನು ಆರಿಸಿದ್ದ. ದಾರಿ ಬೇಗ ಕಳೆಯಲು ತಿಮ್ಮ ದಾರಿಯಲ್ಲಿ ಬಿದ್ದ ಸಣ್ಣ ಕಲ್ಲನ್ನು ಒದೆಯುತ್ತ ಹೊರಟಿದ್ದ. ಹೀಗೆ ಕಲ್ಲಿನೊಡನೆ ಆಡುತ್ತ ಹೊರಟಿದ್ದ ತಿಮ್ಮ ಒಮ್ಮೆ ಕಲ್ಲು ಒದ್ದಾಗ ಅದು ಹೋಗಿ ದಾರಯಲ್ಲಿ ಮಲಗಿದ್ದ ಒಂದು ನಾಯಿಯ ಬಿದ್ದಿತು. ನಾಯಿಯೂ ಎಚ್ಚರಗೊಂಡು ಕಲ್ಲು ಬಂದ ಕಡೆ ನೋಡಿ ಒಮ್ಮೆ ಗುರ್ ಎಂದಿತು. ತಿಮ್ಮ ಹೆದರಿ, ಎಲ್ಲಿ ಈ ನಾಯಿ ತನ್ನನ್ನು ಅಟ್ಟಿಸಿಕೊಂಡು ಬಂದು ಕಚ್ಚುವುದೋ ಎಂದು ಓಡಿದ. ಗೊತ್ತಿಲ್ಲದ ಸಂದಿ ಬಂದಿಗಳನ್ನು ದಾಟುತ್ತ ಮನೆ ಸೇರಿದನು. ಸುರಕ್ಷಿತವಾಗಿ ಮನೆ ಸೇರಿದರೂ ತಿಮ್ಮನ ಭಯ ಹೋಗಿರಲಿಲ್ಲ. ಅಮ್ಮನ ಬಳಿ ಓಡಿ,

"ಅಮ್ಮ ಪಕ್ಕದ ಕ್ರಾಸಿನಲ್ಲಿ ಒಂದು ನಾಯಿ ಇದೆ. ನಂಗೆ ಅದನ್ನ ಕಂಡ್ರೆ ಭಯ. ಶಾಲೆಗೆ ಹೋಗೋ ದಾರಿಯಲ್ಲಿದೆ. ನಾಳೆ ಶಾಲೆಗೆ ಹೋಗುವಾಗ ಕಚ್ಚಿದ್ರೆ ಏನ್ಮಾಡೋದಮ್ಮಾ?"

"ಹೆದರ್ಬೇಡ! ನೀನು ಅದಕ್ಕೆ ಏನಾದ್ರು ಮಾಡಿದ್ರೆ ಮಾತ್ರ ಅದು ನಿನ್ನ ಕಚ್ಚತ್ತೆ" ಎಂದು ಅಮ್ಮ ಸಮಾಧಾನ ಮಾಡಿದರು.

"ಆದ್ರೆ ಅಮ್ಮಾ, ಇವತ್ತು ದಾರಿಯಲ್ಲಿ ಆಟ ಆಡ್ತಾ ಬರ್ತಿದ್ದಾಗ ನಾಯಿ ಹತ್ರ ಕಲ್ಲು ಒದ್ದೆ, ಅದೇ ಕೋಪದಲ್ಲಿ ನಾಳೆ ನಾಯಿ ನಂಗೆ ಕಚ್ಚಿದ್ರೆ?" ಪ್ರಶ್ನಿಸಿದ ತಿಮ್ಮ

"ಸರಿ, ಹೆದರ್ಬೇಡ, ಭಯ ತೋರಿಸದೇ ನಿನ್ನ ಪಾಡಿಗೆ ನೀನು ನಡಿ. ಅದು ಏನು ಮಾಡಲ್ಲ. ನೀನು ಭಯ ತೋರ್ಸಿದ್ರೆ ಅದು ನೀನು ಕಳ್ಳ ಅಂತ ಭಾವ್ಸಿ ಅಟ್ಟಿಸಿಕೊಂಡು ಬರತ್ತೆ" ತಿಳಿ ಹೇಳಿದರು ಅಮ್ಮ.

"ಆದ್ರೆ ನಾನು ಕಳ್ಳ ಅಲ್ವಲ್ಲಾ ಅಮ್ಮಾ, ನಾಯಿಗೆ ಹೇಗೆ ಗೊತ್ತಾಗತ್ತೆ ನಾನು ಕಳ್ಳ ಅಂತ?"

"ನಾಯಿಗಳಿಗೆ ಗೊತ್ತಾಗತ್ತೆ. ವಾಸನೆ ನೋಡಿ ಕಂಡು ಹಿಡಿತಾವೆ. ನೀನು ಕಳ್ಳನಲ್ಲ ಅದ್ಕೆ ನಿಂಗೇನೂ ಮಾಡಲ್ಲ. ಹೆದರ್ಬೇಡ." ಎಂದು ಸಂಜಾಯಿಸಿದರು.

ಅಮ್ಮನ ಮಾತಿಗೆ ತಲೆದೂಗಿ ತಿಮ್ಮ ಆಟವಾಡಲು ಹೊರ ಓಡಿದ. ಎಂದಿನಂತೆ ತನ್ನ ಗೆಳೆಯರನ್ನು ಕೂಗಲು ತಮ್ಮ ಗುಪ್ತ ಶಬ್ಧವನ್ನು ಬಳಸಿದ. ಆದರೆ ಯಾರೂ ಹೊರಗೆ ಬರಲಿಲ್ಲ. ಸರಿಯೆಂದು ಒಬ್ಬನೇ ಚೆಂಡಿನೊಡನೆ ಆಡತೊಡಗಿದ ತಿಮ್ಮ. ಹಾಗೆ ಆಡುತ್ತ ನಾಯಿಗಳ ಬಗ್ಗೆ ಯೋಚಿಸತೊಡಗಿದ.

ನಾಯಿಗಳು ಹೇಗೆ ಕಳ್ಳರನ್ನು ಹಿಡಿಯುತ್ತವೆ? ಎಲ್ಲ ನಾಯಿಗಳೂ ಕಳ್ಳನನ್ನು ಹಿಡಿಯಬಹುದಾ? ಎಲ್ಲಾ ನಾಯಿಗಳೂ ಒಂದೇ ರೀತಿ ಯೋಚಿಸುತ್ತವಾ? ನಾವುಗಳು ಹೇಗೆ ಒಬ್ಬೊಬ್ಬರೂ ಬೇರೆ ಬೇರೆ ರೀತಿಯಲ್ಲಿ ಬೇರೆ ಬೇರೆ ಭಾಷೆ ಮಾತಡುತ್ತೇವೆ, ಹಾಗೆ ನಾಯಿಗಳೂ ಬೇರೆ ಬೇರೆ ರೀತಿ ಬೊಗಳುತ್ತವೆಯೆ? ಹೀಗೆ ಹಲವು ಪ್ರಶ್ನೆಗಳನ್ನು ತಿಮ್ಮ ತನ್ನೊಳಗೆ ಕೇಳಿಕೊಂಡ. ಸರಿ ಇವಕ್ಕೆ ಉತ್ತರ ಕಂಡು ಹಿಡಿಯೋಣವೆಂದು ಸುತ್ತ ಮುತ್ತಲು ನೋಡಿದ. ಮನೆಯ ಬಳಿಯಲ್ಲಿದ್ದ ಸಣ್ಣ ದೇವಸ್ಥಾನದ ಹೊರಗಿದ್ದ ನಾಯಿಯನ್ನು ನೋಡಿ, ಈ ನಾಯಿಯನ್ನು ನೋಡಿ ಅದರ ಬಗ್ಗೆ ಹೆಚ್ಚಿನದ್ದನ್ನು ತಿಳಿದುಕೊಳ್ಳೋಣವೆಂದು ನಾಯಿಯ ಬಳಿ ಹೊರಟ. ನಾಯಿಯನ್ನು ನೋಡುತ್ತ ಅದರ ಮುಖವು ಬೇರೆ ನಾಯಿಗಳ ಮುಖದಂತೆಯೆ ಇದೆಯೆ?, ಬಣ್ಣವಲ್ಲದೆ ಕೇವಲ ನಾಯಿಯ ಮುಖವನ್ನು ನೋಡಿ ಬೇರೆ ನಾಯಿಗಳಿಗಿಂತ ಈ ನಾಯಿಯ ಮುಖದಲ್ಲಿ ವ್ಯತ್ಯಾಸವಿದೆಯೆ? ಎಂದು ಸೂಕ್ಷ್ಮವಾಗಿ ನೋಡತೊಡಗಿದ.

ತಿಮ್ಮನಿಗೆ ತನ್ನ ಪ್ರಶ್ನೆಯ ಉತ್ತರ ಹುಡುಕುವ ಮೊದಲೇ, ತನ್ನನ್ನು ಹೀಗೆ ದುರುಗುಟ್ಟಿ ನೋಡುತ್ತಿದ್ದ ಹುಡುಗನನ್ನು ಕಂಡ ನಾಯಿಯು ಸಂಶಯಗೊಂಡು ತಿಮ್ಮನನ್ನು ನೋಡಿ ಒಮ್ಮೆ ಜೋರಾಗಿ ಬೊಗಳಿತು. ತಿಮ್ಮ ನಾಯಿಯು ತನ್ನನ್ನು ಕಳ್ಳನೆಂದುಕೊಂಡು ಕಚ್ಚಲು ಬರುವುದೆಂದು ಹೆದರಿ ಜೋರಾಗಿ ಕಿರುಚುತ್ತಾ ಮನೆಯೊಳಗೆ ಓಡಿದನು.

“ಅಮ್ಮಾ, ಎಲ್ಲಾ ನಾಯಿಗಳು ನನ್ನ ಕಳ್ಳ ಎಂದು ಕೊಳ್ಳುತ್ತಿವೆ!” ಎಂದ ತಿಮ್ಮ ಹೆದರುತ್ತಲೆ

ತಿಮ್ಮನ ಭಯಭರಿತ ಮುಖ ನೋಡುತ್ತಲೆ ಅಮ್ಮ ಚಿಂತಿತಳಾಗಿ.

“ಈಗೇನಾಯ್ತು ತಿಮ್ಮಾ?” ಎಂದು ಕೇಳಿದಳು.

ತಿಮ್ಮ ತನ್ನ ಕುತೂಹಲದ ಪ್ರಶ್ನೆಗಳ ಉತ್ತರ ಹುಡುಕುವ ಸಂಗತಿ ವಿವರಿಸಿದ. ತಿಮ್ಮ ಮುಗ್ಧತೆಯನ್ನು ಕಂಡು ಅಮ್ಮನಿಗೆ ತಿಮ್ಮನ ಮೇಲೆ ಕರುಣೆ ಬಂದಿತು.

“ಹೆದರ್ಬೇಡ ತಿಮ್ಮ, ನಿನಗೆ ನಾನು ಗಣಪತಿ ದೇವಸ್ಥಾನದಿಂದ ತಂದ ದಾರ ಕಟ್ಟುತ್ತೇನೆ. ಭಯವಾದಾಗ ದೇವರನ್ನು ನೆನೆಯುತ್ತ ಚಿಂತೆ ಮಾಡದೆ ನಡಿ, ಗಣಪತಿ ವಿಘ್ನನಿವಾರಕ, ತೊಂದರೆ ಬರದ ಹಾಗೆ ನೋಡಿಕೊಳ್ಳುತ್ತಾನೆ” ಎಂದು ಅಮ್ಮ ತಿಮ್ಮನ ಭಯಕ್ಕೆ ತನಗೆ ತಿಳಿದ ಸಮಾಧಾನದ ವಿಧಾನ ಬಳಸಿ ತಿಮ್ಮನ ಬಲಗೈಗೆ ದಾರವನ್ನು ಕಟ್ಟಿದಳು.

“ಈಗ ಹೊರಗೆ ಹೋಗ್ಬೇಡ. ಕೈಕಾಲು ತೊಳೆದು ಹೋಂವರ್ಕ್ ಮಾಡು” ಎಂದು ತಿಮ್ಮನ ಗಮನವನ್ನು ಹೊಂವರ್ಕ್ ಕಡೆ ಸಾಗಿಸಿದಳು ಅಮ್ಮ.

ಮಾರನೆಯ ದಿನ ತಿಮ್ಮ ಎಂದಿನಂತೆ ಶಾಲೆಗೆ ಹೊರಟ. ಶಾಲೆಯ ದಾರಿಯಲ್ಲಿ ಹಿಂದಿನ ದಿನ ತನ್ನನ್ನು ಗುರ್ರೆಂದ ನಾಯಿಯು ರಸ್ತೆ ಬದಿಯಲ್ಲಿದ್ದದ್ದನ್ನು ಕಂಡ. ತಿಮ್ಮನಿಗೆ ಶಾಲೆಗೆ ಹೋಗುವ ಅವಸರ, ಜೊತೆಗೆ ದೊಡ್ಡವರ್ಯಾರೂ ಇಲ್ಲ. ತಿಮ್ಮನು ನಾಯಿಯನ್ನು ನೋಡುತ್ತಲೇ ರಸ್ತೆಯ ಇನ್ನೊಂದು ಬದಿಗೆ ನಡೆದನು. ತಿಮ್ಮನಿಗೆ ಭಯ ಕಾಡಿತು. ಬಲಗೈಗೆ ಕಟ್ಟಿದ್ದ ದಾರವನ್ನು ಹಿಡಿದು ಗಣಪತಿಯನ್ನು ನೆನೆದ.

"ಓಂ ಗಣೇಶಾಯ ನಮಹ, ಗಣೇಶ ಈ ನಾಯಿ ನನಗೆ ಏನೂ ಮಾಡದಂತೆ ಕಾಪಾಡಪ್ಪಾ" ಎಂದು ಬೇಡುತ್ತ ನಾಯಿಯನ್ನು ನೋಡುತ್ತಲೆ ಸದ್ದಾಗದಂತೆ ಮೆಲ್ಲಗೆ ಮುಂದೆ ಹೆಜ್ಜೆ ಹಾಕಿದ. ಹೀಗೆ ಮೆಲ್ಲಗೆ ಕಳ್ಳನಂತೆ ಹೆಜ್ಜೆ ಹಾಕುತ್ತಿದ್ದ ತಿಮ್ಮನನ್ನು ನೋಡಿ ನಾಯಿಯು ಸಂಶಯಗೊಂಡು ಅವನನ್ನು ತೀಕ್ಷ್ಣವಾಗಿ ನೋಡುತ್ತ ಮೆಲ್ಲಗೆ ಅವನೆಡೆ ನಡೆಯ ತೊಡಗಿತು. ತಿಮ್ಮ ನಾಯಿಯು ತನ್ನೆಡೆಗೆ ಬರುತ್ತಿದ್ದನ್ನು ಕಂಡು ಇನ್ನಷ್ಟು ಹೆದರಿ ನಾಯಿಯನ್ನು ನೋಡುತ್ತ ನಿಂತ. ನಾಯಿಯು ತಿಮ್ಮನು ಸಿಕ್ಕು ಬಿದ್ದ ಕಳ್ಳನಂತೆ ನಿಂತದ್ದನ್ನು ಕಂಡು ಜೋರಾಗಿ ಬೊಗಳುತ್ತಾ ಅವನೆಡೆಗೆ ಓಡಿತು. ತಿಮ್ಮ ಹೆದರಿ ಎದ್ದನೋ ಬಿದ್ದನೋ ಎಂಬಂತೆ ಮನೆಯೆಡೆಗೆ ಓಡಿದನು. ನಾಯಿಯು ತಿಮ್ಮನನ್ನು ಅಟ್ಟಿಸಿಕೊಂಡು ಓಡಿತು. ತಿಮ್ಮ ಆದಷ್ಟು ಜೋರಾಗಿ ಓಡಿ ಹೇಗೋ ತಪ್ಪಿಸಿಕೊಂಡು ತನ್ನ ಮನೆಯಂಗಳಕ್ಕೆ ಓಡಿ ಅಮ್ಮನ ಹಿಂದೆ ಅಡಗಿಕೊಂಡ. ಅಮ್ಮಾ ತಿಮ್ಮನ ಭಯವನ್ನು ನೋಡಿ ಆತಂಕಗೊಂಡು ತಿಮ್ಮನನ್ನು ತಬ್ಬಿ

"ಏನಾಯ್ತು ಕಂದ" ಎಂದು ಕಣ್ಣೀರುಡುತ್ತಿದ್ದ ತಿಮ್ಮನನ್ನು ಕೇಳಿದಳು.

"ಅಮ್ಮಾ ಗಣಪತಿ ನನಗೆ ಸಹಾಯ ಮಾಡಲಿಲ್ಲ" ಎಂದು ಅಳುತ್ತ ತಿಮ್ಮ ನಡೆದ ವಿಷಯವನ್ನು ಹೇಳಿದ. ಅಮ್ಮಾ ತಿಮ್ಮನ ಮೇಲೆ ಕರುಣೆ ತೋರಿ ತಿಮ್ಮನನ್ನು

ಸಮಾಧಾನ ಪಡಿಸಿ ಶಾಲೆಗೆ ತಾನೆ ಕರೆದುಕೊಂಡು ಹೋದಳು. ಹೋಗುತ್ತ ದಾರಿಯಲ್ಲಿ ನಾಯಿಗಳು ಯೋಚಿಸುವ ರೀತಿ ತನಗೆ ತಿಳಿದಂತೆ ಹೇಳಿದಳು.

ನಾವು ಭಯ ತೋರಿಸಿದರೆ, ಅವುಗಳಿಗೆ ಸಂಶಯ ಹೆಚ್ಚಾಗುತ್ತದೆ. ನಿಂಗೆ ಈ ನಾಯಿಯ ಭಯ ಹೋಗಬೇಕೆಂದರೆ ನೀನು ಒಂದು ನಾಯಿ ಮರಿಯನ್ನು ಸಾಕಿ ಅದರ ಹಾವ ಭಾವಗಳನ್ನು ತಿಳಿದುಕೊಳ್ಳಲು ಅನುವು ಮಾಡಿಕೊಡುವುದಾಗಿ ಹೇಳಿದಳು. ತಿಮ್ಮ ನಾಯಿಗಳ ಸಹವಾಸವೇ ಬೇಡವೆಂದು ತನ್ನ ಭಯದಲ್ಲಿದ್ದುಕೊಂಡೇ ಯೋಚಿಸಿದ. ಕೊನೆಗೂ ತಿಮ್ಮನಿಗೆ ನಾಯಿಗಳ ಬಗ್ಗೆ ಭಯ ಹೋಗಲಿಲ್ಲ. ಅಮ್ಮನ ಸೆರಗನ್ನು ಹಿಡಿದು ಶಾಲೆಯೆಡೆಗೆ ನಡೆದ.

ದೇವರು ನಮ್ಮ ಇಂತಹ ಸಣ್ಣ ಸನ್ನಿವೇಶಗಳಿಗೆ, ತಪ್ಪುಗಳಿಗೆ ಉತ್ತರ ಹುಡುಕಲು ಅನುವು ಮಾಡಿಕೊಡುತ್ತಾರ? ಅನುವು ಮಾಡಿ ಕೊಟ್ಟರೂ ಹೇಗೆ? ನಾಯಿಗಳಿಗೆ ಮಾತ್ರ ಏಕೆ ದೇವರು ಕಳ್ಳನನ್ನು ಹುಡುಕುವ ಶಕ್ತಿ ಕೊಟ್ಟಿದ್ದಾರೆ? ಭಯವು ಏಕೆ ಹೀಗೆ? ಹೀಗೆ ಹಲವು ಪ್ರಶ್ನೆಗಳು ತಿಮ್ಮನ ಭಯ ಆವರಿತ ಮನಸ್ಸಿನಲ್ಲಿ ಮೂಡಿ ಮರೆಯಾದವು.

ನಾವು ದೊಡ್ಡವರಾಗಿ ದೇವರು ನಮ್ಮನ್ನು ತೊಂದರೆಯಿಂದ ಪಾರು ಮಾಡುತ್ತಾರೆಂದು ನಂಬುವುದು ಸರಿಯೇ? ನಮ್ಮ ಭಯಗಳನ್ನು ದಾರ, ತಾಯಿತಗಳನ್ನು ಕಟ್ಟಿಕೊಂಡು ಮನಸ್ಸಿನ ಚಂಚಲತೆಯ ಭಯ ಮೂಡಿಸುವ ಯೋಚನೆಗಳನ್ನು ತಳ್ಳಿ ಹಾಕುವುದು ಸರಿಯೇ? ಹೀಗೆ ಪ್ರಶ್ನೆಗಳು ಬಹಳ! ಈ ಸಂಚಿಕೆಯಿಂದ ನನ್ನೊಡನೆ ದೇವರನ್ನು ಹುಡುಕುವ ಕಾರ್ಯಕ್ಕೆ ನೀವು ಸೇರಬಹುದು. ಮುಂಬರುವ ಸಂಚಿಕೆಗಳಲ್ಲಿ ಗೂಬೆ ತಿಮ್ಮನ ಕಥೆಗಳೊಂದಿಗೆ ತಿಮ್ಮನ ತರ್ಲೆ ಪ್ರಶ್ನೆಗೆ ಉತ್ತರ ಹುಡುಕೋಣ.

# ಸಂಚಿಕೆ ೬ - ಮಾರ್ಜಾಲಬಂಧನ

ಸಂಜೆ ಆರರ ಸುಮಾರು ಹೋಂವರ್ಕ್ ಮುಗಿಸಿ ಎಂದಿನಂತೆ ತಿಮ್ಮ ತಂಗಿಯ ಜೊತೆಗೆ ಕೂತು ಅಪ್ಪ ಹೇಳಿದ ಹಾಗೆ ಹದಿನೈದರ ಮಗ್ಗಿ ರಟ್ಟು ಹೊಡೆದು ಜೋರಾಗಿ ನೆನಪಿಸಿಕೊಳ್ಳುತ್ತಿದ್ದ.

“ಹದಿನೈದೊಂದ್ಲೆ ಹದಿನೈದು, ಹದಿನೈದೆರಡ್ಲೆ ಮೂವತ್ತು, ಹದಿನೈದ್ಮೂರ್ಲೆ ಅರವತ್ನಾಲ್ಕು, ಉಹುಂ ಛೆ, ಮತ್ತೆ ತಪ್ಪಾಯಿತು. ಹದಿನೈದೊಂದ್ಲೆ ಹದಿನೈದು, ಹದಿನೈದೆರಡ್ಲೆ...” ಹೀಗೆ ಮಗ್ಗಿಯ ಕಛೇರಿ ನಡೆಸುತ್ತಿದ್ದ ತಿಮ್ಮನಿಗೆ ಮನೆಯಂಗಳದ ಬಾವಿಯಿಂದ ಶಬ್ದ ಕೇಳಿಸಿತು.

“ಧಡಲ್, ಮಿಯಾಂಂಂಂವ್”,

ತಿಮ್ಮ ಮಗ್ಗಿ ಪಠ್ಯ ಅಲ್ಲೆ ಬಿಟ್ಟು ಬಾವಿಯೆಡೆಗೆ ಓಡಿದ. ಬಾವಿಯ ನೀರು ಕದಲಿದ ಶಬ್ದ ಕೇಳಿ ಬರುತ್ತಿತ್ತು. ತಿಮ್ಮ ಬಾವಿಯಲ್ಲಿ ಮೆಲ್ಲಗೆ ಇಣುಕಿ ನೋಡಿದ. ಒಂದು ಬೆಕ್ಕಿನ ಮರಿಯು ಬಾವಿಯ ಕಲ್ಲಿನ ಮೇಲಿದ್ದ ಚೊಂಬಿನೊಡನೆ ಬಾವಿಯೊಳಗೆ ಬಿದ್ದಿತ್ತು.

“ಅಯ್ಯೋ! ಪಾಪ, ಬೆಕ್ಕಿನ ಮರಿ, ನೀರಲ್ಲಿ ಬಿದ್ಬಿಟ್ಟಿದೆ, ಬೆಕ್ಕಿಗೆ ಈಜು ಬರತ್ತಾ?” ಅಣ್ಣನ ಹಿಂದೆ ಓಡಿ ಬಂದ ತಂಗಿಯನ್ನು ಕೇಳಿದ ತಿಮ್ಮ.

ತಂಗಿ ತನಗೆ ಗೊತ್ತಿಲ್ಲವೆಂದು ಭುಜ ಮೇಲೆರಿಸಿ ಮೆಲ್ಲಗೆ ತಲೆಯಾಡಿಸಿದಳು.

“ಬರಲ್ಲಾ ಅನ್ಸತ್ತೆ, ಇಲ್ದಿದ್ರೆ ಬೆಕ್ಕು ಯಾಕೆ ಹೀಗೆ ಕಿರುಚ್ತಾ ಇತ್ತು?” ತನ್ನ ಪ್ರಶ್ನೆಗೆ ತಾನೆ ಉತ್ತರಿಸಿದ ತಿಮ್ಮ.

“ಅಯ್ಯೋ ಅಣ್ಣಾ! ಹಾಗಾದ್ರೆ ಬೆಕ್ಕು ಸತ್ತು ಹೋಗತ್ತಾ? ಏನು ಮಾಡೋದು ಇವಾಗ?” ಎಂದು ಮುಗ್ಧಳಾಗಿ ಪ್ರಶ್ನಿಸಿದಳು.

“ಗೊತ್ತಿಲ್ಲ, ಅಮ್ಮಂಗೆ ಹೇಳೋಣ ಬಾ” ಎಂದು ಇಬ್ಬರೂ ಮನೆಯೊಳಗೆ ಓಡಿದರು.

“ಅಮ್ಮಾ ಅಮ್ಮಾ! ನಂ ಬಾವಿಯೊಳಗೆ ಒಂದು ಬೆಕ್ಕಿನ ಮರಿ ಬಿದ್ದಿದೆ, ಪಾಪ ಈಜು ಬರಲ್ಲ ಅದಕ್ಕೆ, ಹೊರಗೆ ತೆಗಿ ಬಾ ಅಮ್ಮಾ”

ಮಕ್ಕಳ ಮಗ್ಗಿ ಪಾಠದ ಸದ್ದು ನಿಂತ ಬಗ್ಗೆ ಆಗಲೇ ಕುತೂಹಲಗೊಂಡಿದ್ದ ಅಮ್ಮ ಆಶ್ಚರ್ಯಗೊಂಡು,

“ಹೌದಾ! ಈಗ ಬಿತ್ತಾ ಅದು? ನಡೀರಿ ನೋಡೀಣ”, ಎಂದು ಮಕ್ಕಳನ್ನು ಅಂಗಳಕ್ಕೆ ಆದೇಶಿಸಿದಳು.

ಬಾವಿಯ ಬಳಿಗೆ ಬಂದು ಅಮ್ಮ ಇಣುಕಿ ಬೆಕ್ಕಿನ ಮರಿಯು ನೀರಿನಲ್ಲಿ ಈಜಲಾಗದೆ ಒದ್ದಾಡುತ್ತಿದ್ದನ್ನು ಕಂಡು, ಠಕ್ಕನೆ ಅಲ್ಲೇ ಇದ್ದ ಪ್ಲ್ಯಾಸ್ಟಿಕ್ ಬಕೆಟ್ಟನ್ನು ಬಾವಿಯ ಹಗ್ಗಕ್ಕೆ ಕಟ್ಟಿ ಬಕೆಟ್ಟನ್ನು ನೀರಿಗಿಳಿಸದಳು. ಮೂರು ನಾಲ್ಕು ಬಾರಿ ಬಕೆಟ್ಟನ್ನು ಬೆಕ್ಕಿನ ಬಳಿ ಇಟ್ಟರೂ ಬೆಕ್ಕು ಬಕೆಟ್ಟಿನ ಒಳಗೆ ಬರಲಿಲ್ಲ. ಇನ್ನಷ್ಟು ಹೆದರಿತ್ತು ಬೆಕ್ಕು. ಮತ್ತೊಮ್ಮೆ ಮಗದೊಮ್ಮೆ ಎಂದು ಪ್ರಯತ್ನಿಸಿ ಅಮ್ಮ ಎಂಟನೆಯ ಬಾರಿ ಬೆಕ್ಕನ್ನು ಬಕೆಟ್ಟಿನಲ್ಲಿ ಬರುವಂತೆ ಮಾಡಿದಳು. ಮೆಲ್ಲಗೆ ಹಗ್ಗವನ್ನು ಎಳೆದು ಬಕೆಟ್ಟು ಮೇಲಕ್ಕೆ ತಂದಳು. ಬೆಕ್ಕಿನ ಮರಿಯು ಇನ್ನೂ ಬಕೆಟ್ಟಿನಲ್ಲಿದ್ದ ನೀರಿನಲ್ಲಿ ಹೆದರಿ ಒದ್ದಾಡುತ್ತಿತ್ತು.

"ಹೋಗಿ ಟವಲ್ ತಗೊಂಡ್ಬಾ" ತಿಮ್ಮನಿಗೆ ಅಮ್ಮಾ ನಿರ್ದೇಶಿಸಿದಳು.

ತಿಮ್ಮ ಒಳಗೆ ಪಟ್ಟನೆ ಓಡಿಹೋಗಿ ಟವಲ ತಂದ. ಅಮ್ಮ ಮೆಲ್ಲಗೆ ಬೆಕ್ಕಿನ ಮರಿಯನ್ನು ಬಕೆಟ್ಟಿನಿಂದ ಹೊರಗೆ ತೆಗೆದು, ಅದನ್ನು ಸಮಾಧಾನ ಪಡಿಸುವಂತೆ ನೇವರಿಸುತ್ತಾ, ಟವಲ್ ಬಳಸಿ ಬೆಕ್ಕನ್ನು ವಣಗಿಸತೊಡಗಿದಳು. ಮಕ್ಕಳಿಬ್ಬರೂ ಮುದ್ದಾದ ಬೆಕ್ಕಿನ ಮರಿಯನ್ನು ಕಂಡು ಬಾಯಿಬಿಡುತ್ತಾ ಬೆಕ್ಕು ಸಮಾಧಾನಗೊಳ್ಳುತ್ತಿದ್ದನ್ನು ನೋಡಿದರು. ಬೆಕ್ಕು ನಡುಗುತ್ತಲೇ ಮೆಲ್ಲಗೆ ಒಮ್ಮೆ ಮಿಯಾಂವ್ ಎಂದಿತು. ಮಕ್ಕಳಿಬ್ಬರೂ ನಕ್ಕರು.

"ನೀನು ಶಬ್ದ ಕೇಳಿ ಬೆಕ್ಕು ಬಾವಿಯಲ್ಲಿ ಬಿದ್ದದ್ದನ್ನು ಕಂಡುಹಿಡಿದದ್ದು ಒಳ್ಳೆಯದಾಯಿತು, ಇಲ್ದಿದ್ರೆ ಪಾಪ ಬೆಕ್ಕು ಸತ್ತು ಹೋಗಿತ್ತಿತ್ತು, ಆದ್ರೆ ಹಾಗೆ ಬಾವಿಯ ಬಳಿ ನೀವಿಬ್ರೂ ದೊಡ್ಡವರಿಲ್ದೆ ಹೋಗೋದು ಒಳ್ಳೆಯದಲ್ಲ ಅಂತಾ ಹೇಳಿಲ್ಲಾ ನಿಮ್ಗೆ! ನಿಮ್ಮಪ್ಪಾಜಿಗೆ ತಿಳಿದ್ರೆ ನನಗೆ ಬಯ್ತಾರೆ. ತಿಳೀತಾ?"

ಬಿಸಿ ಹಾಲನ್ನು ಲೋಟದಿಂದ ಲೋಟಕ್ಕೆ ಹಾಕುತ್ತಾ ಅಮ್ಮ ಮಕ್ಕಳಿಗೆ ಬುದ್ದಿವಾದ ಹೇಳಿದಳು. ಮುದ್ದಾದ ಬೆಕ್ಕಿನ ಮರಿಯು ಮನೆಯೊಳಗೆ ಅತ್ತ ಇತ್ತ ಮೆಲ್ಲಗೆ ಓಡಾಡುತ್ತಿದ್ದನ್ನು ನೋಡುತ್ತಿದ್ದ ಮಕ್ಕಳು ಹೂಂಗುಟ್ಟಿದರು. ಮಗ್ಗಿಯೆಲ್ಲವನ್ನು ಮರೆತು ಮರಿ ಮಾರ್ಜಾಲದೊಡನೆ ಆಡುವುದರಲ್ಲಿ ತಲ್ಲೀನರಾಗಿದ್ದರಿಬ್ಬರೂ.

"ಅಮ್ಮಾ! ಬೆಕ್ಕು ನೀರಿನಲ್ಲಿ ಹೇಗೆ ಬಿದ್ದಿತು? ಬೆಕ್ಕಿನ ಅಮ್ಮ ಎಲ್ಲಿದೆ? ಬೆಕ್ಕಿಗೆ ಹಾಲಿನಲ್ಲಿ ಸಕ್ರೆ ಹಾಕಿ ಕೊಡಲ್ವಾ? ಬೆಕ್ಕಿಗೆ ಜ್ವರ..."

"ಸಾಕು ಸಾಕು, ನೀನು ಪ್ರಶ್ನೆಗಳ ರೈಲು ಹಚ್ಬೇಡ ಈಗ! ಮೊದ್ಲು ಪಾಪ ಅದು ಸುಧಾರಿಸಿಕೊಳ್ಳಿ. ನೀರಿಗಂತ ಬಂದಿರ್ಬೇಕು ಈ ಪುಟ್ಟ ಬೆಕ್ಕು" ಬೆಕ್ಕಿಗೆ ಹಾಲು ಕುಡಿಸುತ್ತಾ ಅಮ್ಮ ಮಕ್ಕಳನ್ನು ಸುಮ್ಮನಾಗಿಸಲು,

"ನಿಮ್ಮಪ್ಪಾಜಿ ಬರೋ ಹೊತ್ತಾಯ್ತು, ನೀವು ಮಗ್ಗಿ ಮರೆತು, ಇದರ ಮುಂದೆ ಕೂರ್ಬೇಡಿ, ಹೋಗಿ ಓದಿ, ನಾನು ಬೆಕ್ಕನ್ನ ನೋಡ್ಕೋತೀನಿ. ಅಪ್ಪ ಬಂದ್ಮೇಲೆ ಇದಕ್ಕೆ ಒಂದ್ಕಡೆ ಕಳ್ಸೋ ಯೋಚನೆ ಮಾಡೋಣ."

"ಅಯ್ಯೋ ಅಮ್ಮಾ ಎಷ್ಟು ಮುದ್ದಾಗಿದೆ ಈ ಬಿಳಿ ಬೆಕ್ಕಿನಮರಿ, ನಾವು ಸಾಕೋಣ, ಅಪ್ಪಾಜಿಗೆ ನೀನು ಹೇಳಮ್ಮಾ. ನಾವು ಓದ್ಕೋತೀವಿ ಈಗ,ಆದ್ರೆ ದಯವಿಟ್ಟು ಬೆಕ್ಕಿನ ಮರಿ ಹೊರ್ಗಡೆ ಹಾಕೋದು ಬೇಡಮ್ಮಾ" ಕೇಳಿಕೊಂಡರು ಮಕ್ಕಳಿಬ್ಬರೂ.

"ಸರಿ, ಅಪ್ಪ ಬಂದ್ಮೇಲೆ ನೋಡೋಣ. ಓದಿ ಈಗ"

ಹೂಂಗುಡುತ್ತಾ ಮಕ್ಕಳಿಬ್ಬರೂ ಮಗ್ಗಿ ಮುಂದುವರೆಸಿದರು.

ಮಗ್ಗಿ ಓದುವುದು ಹದಿನೈದು ನಿಮಿಷ ಕೂಡ ಆಗಿರಲಿಲ್ಲ ಅಷ್ಟರಲ್ಲೆ ಅಪ್ಪ ಮನೆಗೆ ಬಂದರು. ಮಕ್ಕಳಿಬ್ಬರೂ ಅಪ್ಪನ ಬಳಿ ಓಡಿ ಅಪ್ಪನಿಗೆ ತಮ್ಮ ಮನೆಗೆ ಹೊಸ ಅತಿಥಿ ಬಂದ ಕಥೆ ಹೇಳಿದರು. ಅಪ್ಪ ನಗುತ್ತಲೆ, ಮಕ್ಕಳ ಉತ್ಸಾಹಕ್ಕೆ ಉತ್ಸಾಹ ಕೂಡಿಸಿದರು. ಮಕ್ಕಳಿಬ್ಬರೂ ಈಗ ಅಪ್ಪನ ಪ್ರಶ್ನಿಸಲು ಶುರು ಮಾಡಿದರು.

“ಅಪ್ಪ, ಈ ಬೆಕ್ಕಿನ ಮರಿಯನ್ನು ನಾವು ಸಾಕಿಕೊಳ್ಳೋಣ್ವಾ? ಬೆಕ್ಕಿನ ಅಮ್ಮ ಎಲ್ಲಿ? ಬೆಕ್ಕಿನ ಮರಿ ಯಾಕೆ ಅದರ ಅಮ್ಮನನ್ನು ಬಿಟ್ಟು ಬಂತು? ಬೆಕ್ಕಿಗೆ ನಾವು ಏನು ಊಟ ಕೊಡ್ಬೇಕು? ಬೆಕ್ಕು ಮಿಯಾಂವ್ ಅಂತ ಮಾತ್ರ ಯಾಕೆ ಹೇಳತ್ತೆ?” ಹೀಗೆ ಹತ್ತಾರು ಪ್ರಶ್ನೆ ಅಪ್ಪನೆಡೆಗೆ ಬೀಸಿದರು

“ಸರಿ, ಎಲ್ಲದಕ್ಕೂ ಉತ್ತರ ಹೇಳ್ತೀನಿ, ಮೊದ್ಲು ಇಬ್ರೂ ಹದಿನೈದರ ಮಗ್ಗಿ ಹೇಳಿ” ಅಪ್ಪ ಸಮಾಧಾನವಾಗೇ ಕೇಳಿದರು.

ಸರಿಯೆಂದು ಮಕ್ಕಳಿಬ್ಬರೂ ಅಪ್ಪನಿಗೆ ಮಗ್ಗಿ ಒಪ್ಪಿಸಿದರು. ಅಪ್ಪ ತನ್ನ ಮಾತಿನಂತೆ ಮಕ್ಕಳಿಗೆ ಉತ್ತರಗಳನ್ನು ಕೊಟ್ಟರು

“ಬೆಕ್ಕುಗಳು ಬಹಳ ಸೂಕ್ಷ್ಮ. ಈ ಬೆಕ್ಕಿನ ಅಮ್ಮ ಊಟ ಹೊಂದಿಸಲು ಹೊರಗೆ ಹೋದಾಗ ಬಾಯಾರಿಕೆಯಾಗಿ ಬಾವಿಯ ಬಳಿ ಬಂದಿರ್ಬೇಕು. ಬೆಕ್ಕುಗಳು ಮರಿಗಳ್ನ ಕೆಲವು ದಿನದಗಳ್ವರೆಗೆ ನೋಡ್ಕೊಳತ್ತೆ, ಆಮೇಲೆ ಅಮ್ಮ ಮರಿಗಳ್ನ ಬಿಟ್ಟು ಹೋಗತ್ತೆ. ಅಮ್ಮ ಮರಿಗಳ್ಜೊತೆ ಇರೋವರ್ಗೂ ಮರಿಗಳಿಗೆ ಹಾಲು ಕೊಡತ್ತೆ, ಆಮೇಲೆ ಮರಿಗಳು ತಮ್ಮ ಊಟ ತಾವೇ ಹುಡ್ಕೋಬೇಕು. ಇಲಿಗಳನ್ನು ಬೇಟೆ ಆಡೋದ್ರಲ್ಲಿ ಬೆಕ್ಕುಗಳು ಎತ್ತಿದ ಕೈ. ಮರಿಗಳು ಸಾಮಾನ್ಯವಾಗಿ ಯಾರ್ದಾದ್ರು ಮನೆಯಲ್ಲಿ ಉಳಿತಾವೆ, ಇಲ್ಲಾ ಕದ್ದು ಮನೆಗಳಿಂದ ಹಾಲು ಕುಡಿತಾವೆ. ಬೆಕ್ಕುಗಳು ನಾಯಿಗಳ ಹಾಗೆ ಎಲ್ಲಾ ಮತು ಕೇಳಲ್ಲ, ಇಷ್ಟ ಬಂದಾಗ ಮನೆಗೆ ಬರ್ತಾವೆ, ಇಷ್ಟ ಬಂದಾಗ ಹೋಗ್ತಾವೆ. ಅದಕ್ಕೆ ಬೆಕ್ಕು ಸಾಕೋದರ ಬದ್ಲು ನಾಯಿ ಸಾಕೋದು ಒಳ್ಳೆಯದು. ಇದಲ್ದೆ ಬೆಕ್ಕು ಮಿಯಾಂವ್ ಯಾಕೆ ಅನ್ನುತ್ತೆ ಅಂದ್ರೆ ಅದಕ್ಕೆ ನಮ್ಮಷ್ಟು ಬುದ್ದಿ ಇಲ್ಲಾ. ಪ್ರಾಣಿಗಳದ್ದು ತಮ್ದೇ ಆದ ಭಾಷೆ”

ಮಕ್ಕಳು ಬಾಯಿಬಿಡುತ್ತಾ ಅಪ್ಪ ಹೇಳಿದ್ದನ್ನೆಲ್ಲವನ್ನು ಕೇಳಿದರು. ಆದರೆ ತಿಮ್ಮನಿಗೆ ಇನ್ನಷ್ಟು ಪ್ರಶ್ನೆ ಮೂಡಿದವು.

“ಆದ್ರೆ ಅಪ್ಪಾ, ನಾಯಿಗಳು ನಮ್ಗೆ ಕಚ್ತಾವೆ, ಅಲ್ದೆ ಜೋರಾಗಿ ಬೊಗಳ್ತಾವೆ ಬೇರೆ. ನಂಗೆ ನಾಯಿ ಅಷ್ಟೊಂದು ಇಷ್ಟ ಇಲ್ಲ. ನಮ್ಗೆ ಸ್ಕೂಲ್ನಲ್ಲಿ ಪಾಠ ಹೇಳಿದಂಗೆ ನಾನು ಈ ಮರಿ ಬೆಕ್ಕಿಗೆ ಈಗಿಂದಾನೆ ಮಾತು ಕಲ್ಸಿದ್ರೆ ನಾನು ಹೇಳಿದಂಗೆ ಕೇಳತ್ತೆ. ನಾನು ಇದಕ್ಕೆ ಒಂದು ಒಳ್ಳೆ ಹೆಸರು ಇಟ್ಟು, ದಿನಾ ಹಾಲು ಕೊಟ್ಟು, ಈಗಿಂದಾನೆ ನಾನು ಹೇಳಿದಂಗೆ ಕೇಳೋ ಹಾಗೆ ಮಾಡಿದ್ರೆ ಹೇಗೆ? ದಯವಿಟ್ಟು ಅಪ್ಪ ಈ ಬೆಕ್ಕು ಸಾಕೋಣ.”

“ಸರಿ, ಸಾಕೋಣಂತೆ, ಆದ್ರೆ ಬೆಕ್ಕು ನಾವು ಹೇಳಿದಂಗೆ ಕೇಳಲ್ಲ ಪುಟ್ಟಾ. ಕೆಲವು ಮಾತು ಕೇಳತ್ತೆ ಬಹಳಷ್ಟು ಕೇಳಲ್ಲ” ಎಂದು ಹೇಳುತ್ತಾ ಕೆಲಸದಿಂದ ದಣಿದು ಬಂದ

ಅಪ್ಪ ಊಟ ಮಾಡಲು ಕೈಕಾಲು ತೊಳೆಯಲು ಹೊರಟರು.

ತಿಮ್ಮನಿಗೆ ಅಪ್ಪ ಬೆಕ್ಕನ್ನು ಸಾಕಲು ಒಪ್ಪಿದ್ದಕ್ಕೆ ಸಂತಸವಾಗಿತ್ತು. ಬೆಕ್ಕಿನೊಡನೆ ಆಡಲು ಶುರು ಮಾಡಿದ. ಬೆಕ್ಕಿಗೆ ಚಿಂಟೂ ಎಂದು ಹೆಸರಿಟ್ಟ, ಕೆಲ ಕಾಲ ಬೆಕ್ಕು ತನ್ನ ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತಾ ಓಡಾಡುತ್ತಿದ್ದನ್ನು ಕಂಡು ಆನಂದಿಸಿದ. ಆದರೆ ಹೊಟ್ಟೆ ತುಂಬಿದ ಬೆಕ್ಕು ಈಗ ಹೊರಗೆ ಹೋಗಬೇಕೆಂದು ಬಯಸಿತು.

"ಏಯ್ ಚಿಂಟೂ, ಬಾ ಇಲ್ಲಿ. ಹೊರಗೆ ಹೋಗ್ಬೇಡ. ಇವತ್ತಿಂದ ಇದು ನಿನ್ಮನೆ.ನೀನು ಇಲ್ಲಿ ಕೂತ್ಕೋ" ಎಂದು ಬೆಕ್ಕಿಗೆ ಬೆರಳ ಮಾಡಿ ತೋರಿಸಿದ.

ಆದರೆ ಇನ್ನೂ ಅಮ್ಮನ ಮಡಿಲಿನಿಂದ ಸಡಿಲವಾಗಿರದ ಪುಟ್ಟ ಬೆಕ್ಕು "ಮಿಯಾಂವ್" ಎನ್ನುತ್ತಾ ತಾಯಿಯೆನ್ನರಸಿ ಬಾಗಿಲಿನೆಡೆಗೆ ಹೊರಟಿತು. ತಿಮ್ಮನಿಗೆ ಬೇಸರವಾಯಿತು. ಬೆಕ್ಕನ್ನು ಎತ್ತಿ ತನ್ನ ಕಾಲುಗಳ ಮೇಲೆ ಕೂರಿಸಿ.

"ನೀನು ಇಲ್ಲೇ ಇರು. ನಾನ್ ನಿನ್ನಾ ಚೆನ್ನಾಗಿ ನೋಡ್ಕೋತೀನಿ. ಹೊರ್ಗಡೆ ಹೋದ್ರೆ ನಾಯಿ ಕಚ್ಚತ್ತೆ. ಇಲ್ಲಾ ಮತ್ತೆ ಬಾವಿನಲ್ಲಿ ಬೀಳ್ತೀಯಾ" ಎಂದು ಬೆಕ್ಕಿಗೆ ತನ್ನ ರೀತಿಯಲ್ಲಿ ಸಂಜಾಯಿಸಿದ. ಬೆಕ್ಕು ಮಾತು ಕೇಳುವುದೆ? ಮತ್ತೆ ಹೊರಟಿತು ಬಾಗಿಲಿನೆಡೆಗೆ. ಇದರಿಂದ ಕೊಂಚ ಕುಪಿತನಾದ ತಿಮ್ಮ ತಂಗಿಗೆ ಬೆಕ್ಕನ್ನು ಹಿಡಿದುಕೊಂಡಿರಲು ಹೇಳಿ ತನ್ನ ರೂಮಿಗೆ ಓಡಿದ.

"ಅಣ್ಣಾ ಹೇಳಿದ್ದು ಸರಿ ಚಿಂಟೂ. ನೀ ಇಲ್ಲೇ ಇರು" ಎಂದು ಬೆಕ್ಕನ್ನು ಮಾತಾಡಿಸುತ್ತಿದ್ದ ತಂಗಿಯ ಬಳಿ ತಿಮ್ಮ ಓಡಿ ಬಂದ. ತಾನು ತಂದ ಸಣ್ಣ ಹಗ್ಗವನ್ನು ಬೆಕ್ಕಿನ ಕುತ್ತಿಗೆಗೆ ಕಟ್ಟಿದ.

"ಈಗ ಚಿಂಟೂ ಎಲ್ಲೂ ಹೋಗಲ್ಲ. ಇದಕ್ಕೆ ನಾವು ಮಾತ್ಕಲಿಸ್ಬೇಕು. ನಾನು ಹೋಗಿ ಹಾಲು ತಗೊಂಡ್ಬರ್ತೀನಿ. ಹಾಲ್ ಕುಡ್ಸಿದ್ರೆ ನಂ ಮಾತ್ಕೇಳತ್ತೆ ತಾನಾಗಿ" ಎಂದವನೆ ಓಡಿ ಬಟ್ಟಲಿನಲ್ಲಿ ಹಾಲು ತಂದ ತಿಮ್ಮ. ಬೆಕ್ಕಿಗೆ ಹಾಲು ಕುಡಿಸುತ್ತಾ

"ಚಿಂಟೂ ನಾವು ತುಂಬಾ ಒಳ್ಳೆಯವ್ರು ನಿಂಗೇನು ಮಾಡಲ್ಲ. ತಗೋ ಹಾಲು ಕುಡಿ" ಎಂದು ಬೆಕ್ಕಿಗೆ "ಮಾತು" ಕಲಿಸಲು ಮುಂದಾದ. ಆದರೆ ಬೆಕ್ಕಿಗೆ ಹೊರಗೆ ಹೋಗುವುದೆ ಚಿಂತೆ. ತಿಮ್ಮನ ಮಾತಿಗೆ ಎಡೆಗೊಡದೆ ಹೊರಗೆ ಹೊರಟಿತು. ತಿಮ್ಮ ಬಹುಶಹ ಬೆಕ್ಕಿಗೆ ಹೊರಗೆ ತಣ್ಣಗಿರಲು ಇಷ್ಟವೆಂದು ಭಾವಿಸಿ. ಬೆಕ್ಕನ್ನು ನಡೆಸಿಕೊಂಡು ಹೊರಗೆ ಹೊರಟ. ಹೊರಗೆ ಬಂದ ಬೆಕ್ಕು ಮನೆಯಂಗಳ ದಾಟುವುದಕ್ಕೆ ಹೊರಟಿದ್ದನ್ನು ಕಂಡು ಹೆದರಿ ತಿಮ್ಮ ಹಗ್ಗವನ್ನು ಎಳೆಯುತ್ತಾ ಬೆಕ್ಕನ್ನು ಮನೆಯೆಡೆಗೆ ತಿರುಗಿಸಿ. ಮನೆಯ ಹೊರಗಿನ ಕಿಟಕಿಗೆ ಕಟ್ಟಿದ. ಬೆಕ್ಕು ಹೊರಗೆ ಹೋಗಲು ಪ್ರಯತ್ನಿಸಿ, ಸೋತು ಕಟ್ಟಿದ್ದ ಹಗ್ಗವನ್ನು ಮಿಯಾ-ಂವ್ ಎನ್ನುತ್ತಲೇ ಕಚ್ಚಲಾರಂಭಿಸಿತು. ತಿಮ್ಮ ಇದನ್ನು ಕಂಡು ಮೆಲ್ಲಗೆ ಬೆಕ್ಕಿಗೆ ಹೊಡೆಯುತ್ತ

"ಏಯ್, ಚಿಂಟೂ ನೀನು ಹೇಳಿದಂಗೆ ಕೇಳ್ಬೇಕು. ಇಲ್ಲಾ ಅಂದ್ರೆ ನಿಂಗೆ ರಾತ್ರಿಯಲ್ಲಾ ಕಟ್ಟು ಹಾಕ್ತೀನಿ. ಬೆಳಗ್ಗೆ ನಿನಗೆ ಬುದ್ಧಿ ಬರತ್ತೆ" ಎಂದ ಬೆಕ್ಕಿನ ವ್ಯಾಮೋಹದಲ್ಲಿ ಕುಪಿತಗೊಂಡ ತಿಮ್ಮ.

ಬೆಕ್ಕು ತನ್ನ ಮಾತು ಕೇಳದ್ದನ್ನು ಕಂಡು ತಿಮ್ಮ ಬೆಕ್ಕನ್ನು ಹೊರಗೆ ಬಿಡಲು ನಿರ್ಧರಿಸಿ ಊಟ ಮಾಡಲು ಒಳಗೆ ಹೋದ.

ಊಟದ ನಂತರ ಮರಳಿದ ತಿಮ್ಮನಿಗೆ ಬೆಕ್ಕು ಕಟ್ಟಿ ಹಾಕಿದ್ದಲ್ಲಿಯೆ ಮಲಗಿದ್ದನ್ನು ಕಂಡು ಸಂತಸವಾಯಿತು.

"ಈಗ ಮಾತು ಕೇಳಲಿಕ್ಕೆ ಶುರು ಮಾಡಿದ್ಯಾ ಚಿಂಟೂ!" ಎಂದು ನಗುತ್ತ ಮನೆಯೊಳಗೆ ಹೋಗಿ

"ಅಮ್ಮಾ ಚಿಂಟೂ ಮಲಗಿದೆ, ನಾಳೆ ಬೆಳಗ್ಗೆ ಬೇಗ ಎಬ್ಬಿಸು ನಂಗೆ, ನಾನು ಚಿಂಟೂ ಜೊತೆ ಆಟ ಆಡಿ ಆಮೇಲೆ ಸ್ಕೂಲಿಗೆ ಹೋಕ್ತೀನಿ"

"ಸರಿ, ಹೊತ್ತಾಯ್ತು, ನೀನು ಹೋಗಿ ಮಲಗು" ಮನೆಗೆಲಸ ಮುಗಿಸುತ್ತ ಅಮ್ಮ ಅಡುಗೆ ಮನೆಯಿಂದಲೇ ಉತ್ತರಿಸಿದಳು.

ತಿಮ್ಮ ತನ್ನ ಬುದ್ದಿವಂತಿಕೆಗೆ ತಾನೆ ಬೆನ್ನುತಟ್ಟಿಕೊಳ್ಳುತ್ತ ಮಾರನೆಯ ದಿನ ಚಿಂಟುವಿಗೆ ಏನು ಹೇಳಿಕೊಡಬೇಕೆಂದು ಯೋಚಿಸುತ್ತಾ ಮಲಗಿದ.

ಬೆಳಗ್ಗೆ ಆರಾಗಿತ್ತು. ತಿಮ್ಮನಿಗೆ ಕನಸಿನ ತುಂಬ ಬರಿ ಚಿಂಟೂ ಹಾಗು ತನ್ನ ಗೆಳೆತನದ್ದೇ ಕನಸು. ಹೇಗೆ ಚಿಂಟು ತನ್ನ ಮಾತು ಕೇಳುವನು, ಹೇಗೆ ತನ್ನೊಡನೆ ಚೆಂಡಾಟವಾಡುವನು, ಹೀಗೆ ಸಣ್ಣ ಮನಸ್ಸಿನ ದೊಡ್ಡ ಕನಸುಗಳು. ಅಮ್ಮ ತಿಮ್ಮನನ್ನು ಶಾಲೆಗೆ ತಯಾರಾಗಲು ಎಬ್ಬಿಸಿದರು. ತಿಮ್ಮ ಎಂದಿನಂತೆ ಮುಖ ತೊಳೆಯಲು ಹೋಗದೆ ಮೊದಲು ಚಿಂಟುವನ್ನು ನೋಡಲು ಹೊರಟ. ಆದರೆ ಚಿಂಟು ತಾನು ಕಟ್ಟಿದ್ದ ಜಾಗದಲ್ಲಿರಲಿಲ್ಲ.

"ಅಮ್ಮಾ, ಚಿಂಟೂ ಎಲ್ಲಿ. ರಾತ್ರಿ ಕಟ್ಟಿ ಹಾಕಿದ್ದೆ. ಈಗ ಬರಿ ಹಗ್ಗ ಇದೆ ಅಲ್ಲಿ. ಎಲ್ಲಿ ಹೋದ ನನ್ಚಿಂಟೂ!" ಎಂದು ಅಮ್ಮನ ಬಳಿ ಓಡುತ್ತ ಬಂದ ತಿಮ್ಮ.

"ನಿನ್ನ ಪ್ರೀತಿಯ ಬೆಕ್ಕಿನ ಮರಿ ರಾತ್ರಿಯೆಲ್ಲಾ ಮಿಯಾಂವ್ ಮಿಯಾಂವ್ ಅಂತ ಅಳ್ತಾ ಇತ್ತು. ಬೆಕ್ಕನ್ನಾ ಯಾರಾದ್ರೂ ಕಟ್ತಾರಾ? ನಾಯಿ ತರಹ ಅಲ್ಲಾ ಪುಟ್ಟಾ ಅವು. ಮನೆಯಿಂದ ಹೊರಗೆ ಓಡಾಡೋಕೆ ಇಷ್ಟಪಡ್ತವೆ. ನಿಮ್ಮಪಾಜಿಗೆ ರಾತ್ರಿ ನಿದ್ದೆ ಮಡಾಕೆ ಬಿಡ್ಲಿಲ್ಲಾ ಅದು. ಅದಕ್ಕೆ ಕಟ್ಟು ಬಿಡ್ಸಿದ್ರು. ಅದಕ್ಕೆ ಬೇಕು ಅಂದ್ರೆ ಮತ್ತೆ ಬರತ್ತೆ ಬಿಡು"

ತಿಮ್ಮನ ಕಣ್ಣು ತುಂಬಾ ನೀರು ತುಂಬಿ ಮೆಲ್ಲಗೆ ಕೆನ್ನೆಯ ಮೇಲೆ ಹರಿಯಿತು. ತಾನು ಮಾಡಿದ್ದು ಒಳ್ಳೆಯದಲ್ಲ. ಪಾಪ ರಾತ್ರಿಯಲ್ಲಿ ಅಳುವ ಗೋಳು ಬಂದಿತು ತನ್ನ ಚಿಂಟೂವಿಗೆ. ಪಾಪ ಅದರ ಅಮ್ಮನ ನೆನಪಾಗಿರಬೇಕು, ತಾನು ಹೇಗೆ ತನ್ನ ಅಪ್ಪ ಅಮ್ಮನ ಬಳಿ ಇರುವನೋ ಹಾಗೆ ಬೆಕ್ಕಿಗೂ ಅನಿಸಿರಬೇಕು. ದೇವರು ಖಂಡಿತ ತನ್ನನ್ನು ಶಿಕ್ಷಿಸುವನು.

ಆದರೆ ಆ ಪುಟ್ಟ ಬೆಕ್ಕು ಏಕೆ ನಾಯಿಗಳಂತೆ ಅಲ್ಲ. ನಾಯಿಯನ್ನು ಕಟ್ಟಿ ಮಾತು ಕೇಳಿಸಬಲ್ಲದಾದರೆ ಬೆಕ್ಕನ್ನು ಏಕೆ ಕಟ್ಟಿಹಾಕಬಾರದು? ಒಂದೂಂದು ಪ್ರಾಣಿಯೂ ಒಂದೊಂದು ರೀತಿ ಏಕೆ? ತಾನು ಅಷ್ಟು ಪ್ರೀತಿ ತೋರಿಸಿದರೂ ಚಿಂಟೂವಿಗೆ ಏಕೆ ಇಷ್ಟವಾಗಲಿಲ್ಲ? ಏಕೆ ತಾನು ಹೀಗೆ ಕೆಟ್ಟವನಾಗಿ ಚಿಂಟೂವನ್ನು ಕಟ್ಟಿದೆ? ಹೀಗೆ ಹಲವಾರು ಪ್ರಶ್ನೆಗಳು ತಿಮ್ಮನ ಕಣ್ಣೀರಿನಂತೆ ಹರಿದುಬಂದವು.

ದೇವರು ಒಂದೂಂದು ಪ್ರಾಣಿಯನ್ನು ಸೃಷ್ಟಿಸಿದ್ದರೆ. ಒಂದೂಂದು ಒಂದು ರೀತಿ ಏಕೆ? ಪ್ರಾಣಿಗಳಲ್ಲಿ ಈ ವಿವಿಧತೆಯನ್ನು ಹುಟ್ಟುಹಾಕಿರಲು ಕಾರಣವಿದೆಯೆ? ಎಲ್ಲಾ ಪ್ರಾಣಿಗಳದ್ದು ಒಂದು ಭಾಷೆಯಾದರೆ ನಮ್ಮ ಭಾಷೆಗಳು ಏಕೆ ಅವುಗಳ ಹಾಗಿಲ್ಲ. ಇದ್ದರೂ ನಮಗೇಕೆ ಅರ್ಥವಾಗುವುದಿಲ್ಲ. ಹೀಗೆ ಪ್ರಶ್ನೆಗಳು ಬಹಳ! ಈ ಸಂಚಿಕೆಯಿಂದ ನನ್ನೊಡನೆ ದೇವರನ್ನು ಹುಡುಕುವ ಕಾರ್ಯಕ್ಕೆ ನೀವು ಸೇರಬಹುದು. ಮುಂಬರುವ ಸಂಚಿಕೆಗಳಲ್ಲಿ ಗೂಬೆ ತಿಮ್ಮನ ಕಥೆಗಳೊಂದಿಗೆ ತಿಮ್ಮನ ತರ್ಲೆ ಪ್ರಶ್ನೆಗೆ ಉತ್ತರ ಹುಡುಕೋಣ.

# ಸಂಚಿಕೆ ೭ - ಹುಟ್ಟುಹಬ್ಬದ ದಿನ

“ಒಂದು, ಎರಡು, ಮೂರು, ನಾಲ್ಕು...” ಎಂದು ಜೋರಾಗಿ ಎಣಿಸುತ್ತ ತಿಮ್ಮ ಚಾಕಲೇಟ್ ಕ್ಯಾಂಡಿಗಳನ್ನು ಒಂದು ಡಬ್ಬಕ್ಕೆ ಹಾಕುತ್ತಿದ್ದ.

“ಸರಿಯಾಗಿ ಎಣಿಸು ತಿಮ್ಮಾ, ಎಲ್ಲರಿಗೂ ಒಂದೆ ಒಂದು ಬರೋ ಹಾಗೆ ಡಬ್ಬದಲ್ಲಿ ಹಾಕು, ಉಳಿದದ್ದನ್ನಾ ಮನೆಯಲ್ಲಿಟ್ಟು ಹೋಗ್ಬೇಕು ಸರೀನಾ”

ಸರಿ ಅಮ್ಮಾ ಅನ್ನುವ ಹಾಗೆ ತಲೆಯಾಡಿಸಿದ ಚಾಕಲೇಟ್ ಎಣಿಸುವುದರಲ್ಲಿ ಮಗ್ನನಾಗಿದ್ದ ತಿಮ್ಮ.

ಮಾರನೆಯ ದಿನ ತನ್ನ ಹುಟ್ಟುಹಬ್ಬವಾದದ್ದರಿಂದ ತಿಮ್ಮ ಹಿಂದಿನ ರಾತ್ರಿಯೇ ಉತ್ಸುಕನಾಗಿ ತಯಾರಿ ನಡೆಸಿದ್ದ.

“ಅಣ್ಣಾ ನನಗೆ ಮಾತ್ರ ನೀನು ಜಾಸ್ತಿ ಚಾಕಲೇಟ್ ಕೊಡ್ಬೇಕು, ನಾನು ನನ್ ಹುಟ್ಟುಹಬ್ಬ ಬಂದಾಗ ನಿಂಗೆ ಜಾಸ್ತಿ ಕೊಡ್ತೀನಿ” ಎಂದು ಕೇಳಿಕೊಂಡಳು ಪುಟ್ಟ ತಂಗಿ

“ಮೂವತ್ತೊಂದು, ಮೂವತ್ತೆರಡು... ಹಾಂ ಸರಿ...ಮೂವತ್ಮೂರು...” ತಿಮ್ಮ ಎಣಿಸುವುದರಲ್ಲಿ ಮುಳುಗಿದ.

ಮುಂಜಾನೆ ಆರಕ್ಕೆ ಎಂದಿನಂತೆ ಎದ್ದು ತಿಮ್ಮ ಶಾಲೆಗೆ ಹೊರಡಲು ಉತ್ಸುಕನಾಗಿದ್ದ. ಹಾಕಿಕೊಳ್ಳಲು ಹೊಸ ಬಟ್ಟೆ ಹಾಗೂ ಬೂಟುಗಳನ್ನು ಅಪ್ಪ ತಿಮ್ಮನಿಗೆ ಹುಟ್ಟುಹಬ್ಬಕ್ಕೆಂದು ಕೊಡಿಸಿದ್ದರು. ತಿಮ್ಮನಿಗೆ ಹೊಸ ಬಟ್ಟೆ ಹಾಕಿಕೊಂಡು ಶಾಲೆಗೆ ಹೋಗಲು ಬಹಳ ತವಕ, ಕಾರಣ ವರ್ಷದಲ್ಲಿ ಕೆಲವು ಸಾರ್ತಿ ಮಾತ್ರ ಶಾಲೆಗೆ 'ಕಲರ್ ಡ್ರೆಸ್' ಹಾಕಿಕೊಂಡು ಹೋಗಲು ಸಿಗುತ್ತಿತ್ತು. ಅಲ್ಲದೆ ಹುಟ್ಟು ಹಬ್ಬದ ದಿನವಾದ್ದರಿಂದ ಎಲ್ಲರದ್ದೂ ಹುಟ್ಟುಹಬ್ಬದ ಹುಡುಗನ ಮೇಲೆ ಕಣ್ಣು. ಎಲ್ಲರೂ ಬಂದು ಶುಭಾಶಯ ಹೇಳುವರು.

'ಅಮ್ಮಾ ನನ್ ಕಲರ್ ಡ್ರೆಸ್ ಎಲ್ಲಿ? ನಾನು ಬೇಗ ಹೋಗ್ಬೇಕು ಶಾಲೆಗೆ. ಲೇಟಾದ್ರೆ ಪ್ರೆಯರ್ ಲೈನಲ್ಲಿ ಗುದ್ದಾಟ. ನನ್ ಬಟ್ಟೆ ಗಲೀಜಾಗ್ಬಾರ್ದು ಅಂದ್ರೆ ಬೇಗ ಹೋಗಿ ಮೊದಲ್ನೆ ಲೈನಲ್ಲಿ ನಿಂತ್ಕೋಬಹುದು.” ಸ್ನಾನ ಮುಗಿಸಿದ ತಿಮ್ಮ ಅಮ್ಮನಿಗೆ ಕೇಳಿದ

“ನಾನು ಬಂದು ನಿನ್ನ ರೆಡಿ ಮಾಡ್ತೀನಿ. ಮೊದ್ಲು ದೇವರ ಪೂಜೆ ಮಾಡು. ಹುಟ್ಟುಹಬ್ಬದ ದಿನ ದೇವರಲ್ಲಿ ಒಳ್ಳೆಯದಾಗ್ಲಿ, ಚೆನ್ನಾಗಿ ಮಾರ್ಕ್ಸ್ ಬರ್ಲಿ ಅಂತ ಕೇಳ್ಕೊಂಡ್ರೆ ಜಾಣ ಹುಡುಗ ಅಂತ ದೇವ್ರು ನಿಂಗೆ ಒಳ್ಳೆ ಬುದ್ದಿ ಕೊಡ್ತಾರೆ”

“ಸರಿ,...ಓಂ ಗುರು ಬ್ರಹ್ಮ ಗುರುರ್ವಿಷ್ಣು..” ಹೀಗೆ ಅಪ್ಪ ಹೇಳಿಕೊಟ್ಟ ನಾಲ್ಕು ಸಂಸ್ಕೃತ ಶ್ಲೋಕಗಳನ್ನು ಹೇಳಿ ತಿಮ್ಮ ದೇವರಲ್ಲಿ ಬೇಡಿಕೊಂಡ, “ದೇವ್ರೆ ನಂಗೆ ಒಳ್ಳೆ ಬುದ್ದಿ ಕೊಡಪ್ಪ. ನಾನು ಚೆನ್ನಾಗಿ ಮಾರ್ಕ್ಸ್ ತೆಗೆಯೋ ಹಾಗಾಗ್ಲಿ. ಇವತ್ತು ಲಾಸ್ಟ್ ಟೆಸ್ಟಿನ ರಿಜಲ್ಟು. ನನಗೆ ತಪ್ಪಿಲ್ಲದಂತೆ ಚೆನ್ನಾಗಿ ಮಾರ್ಕ್ಸ್ ಬರ್ಲಪ್ಪ”

ಅಮ್ಮ ಅಡುಗೆ ಮನೆಯ ಕೆಲಸ ಬಿಟ್ಟು ತಿಮ್ಮನನ್ನು ತಯಾರು ಮಾಡಿದರು.

"ನೋಡು ಹೇಗೆ ನೀಟಾಗಿ ಇನ್ಸರ್ಟ್ ಮಾಡಿದಿನಿ. ಹುಡುಗರ ಜೊತೆ ಆಟ ಆಡ್ತಾ ಎಲ್ಲಾ ಹಾಳು ಮಾಡ್ಬೇಡ. ಹೊಸ ಬಟ್ಟೆ ಚೆನ್ನಾಗಿ ನೋಡ್ಕೊ. ಎಲ್ಲಿ ಗಲ್ಲ ತೋರ್ಸು. ಧೃಷ್ಟಿ ಆಗ್ದೆ ಇರ್ಲಿ ಅಂತ ಕಣ್ಣಪ್ಪು ಹಚ್ಚಿದಿನಿ, ಉಜ್ಕೋ ಬೇಡ. ಸರಿ ತಿಂಡಿ ತಿನ್ನಿ ಇಬ್ರೂ. ಇವತ್ತು ನಾನೇ ಬರ್ತಿನಿ ಶಾಲೆಗೆ ಬಿಡೋಕೆ"

ಮಕ್ಕಳಿಬ್ಬರೂ ಅಮ್ಮನ ಮಾತು ಪಾಲಿಸಿದರು. ನಂತರ ಅಮ್ಮ ಮಕ್ಕಳನ್ನು ಶಾಲೆಗೆ ಕರೆದೊಯ್ದಳು.

ಶಾಲೆಯ ಲೈನಿನಲ್ಲಿ ಎಂದಿನಂತೆ ತಿಮ್ಮ ನಿಂತಿದ್ದ. ಅಕ್ಕಪಕ್ಕದ ಹುಡುಗರೆಲ್ಲರದ್ದೂ ತಿಮ್ಮನ ಮೇಲೆ ಕಣ್ಣು.

"ಏ ಹ್ಯಾಪಿ ಬರ್ತ್ಡೇ ಕಣೋ! ಯಾವ ಚಾಕಲೇಟ್ ಹಂಚ್ತೀಯಾ? ಕ್ಯಾಡ್ಬರೀಸಾ? ನಂಗೆ ಅದು ತುಂಬಾ ಇಷ್ಟ. ಹೈ ಹೊಸ ಪವರ್ ಶೂ! ಕಪಿಲ್ ದೇವ್ದು. ನೀನೆ ಅದೃಷ್ಟವಂತ ಕಣೋ. ನಮ್ಮಪ್ಪಂಗೆ ನಾನು ಬರ್ತ್ಡೇಗೆ ಕೊಡ್ಸೋಕೆ ಹೇಳ್ತೀನಿ" ಹುರುಪಿನಿಂದ ಹೇಳಿದ ಒಬ್ಬ ಪಕ್ಕದ ಕ್ಲಾಸಿನ ಹುಡುಗ.

"ಶ್, ಪ್ರಾರ್ಥನೆ ಟೈಮ್ ಆಯ್ತು. ಆಮೇಲೆ ಕ್ಲಾಸಿಗೆ ಬಂದಾಗ ನಿನ್ಗೆ ಗೊತ್ತಾಗತ್ತೆ" ಹುಡುಗನನ್ನು ಸುಮ್ಮನಾಗಿಸಿದ ತಿಮ್ಮ.
ಹುಡುಗರೆಲ್ಲರೂ ಪ್ರಾರ್ಥನೆ ಮುಗಿಸಿ ಎಂದಿನಂತೆ ಸಾಲಾಗಿ ತಮ್ಮ ತಮ್ಮ ಕಕ್ಷೆಗಳಿಗೆ ತೆರಳಿದರು. ತಿಮ್ಮನ ಕಕ್ಷೆಗೆ ಮೊದಲ ಪಾಠ ಗಣಿತವಾಗಿತ್ತು. ಗಣಿತದ ಮೇಡಂ ಬಂದು ಅಂದಿನ ಅಟೆಂಡೆನ್ಸ್ ಶುರು ಮಾಡಿದರು. ಹಾಗೆ ಒಮ್ಮೆ ಕಕ್ಷೆಯಲ್ಲಿ ಕಣ್ಣು ಹಾಯಿಸಿದರು. ತಿಮ್ಮ ಸ್ಕೂಲಿನ ಉನಿಫಾರ್ಮ್ನಲ್ಲಿಲ್ಲದ್ದನ್ನು ಕಂಡು

"ತಿಮ್ಮಾ ಯಾಕೆ ಇವತ್ತು ಉನಿಫಾರ್ಮ್ ಹಾಕಿಲ್ಲ? ನಿನ್ನ ಹುಟ್ಟುಹಬ್ಬ ನಾ?" ತಿಮ್ಮನನ್ನು ವಿನಯವಾಗಿ ಕೇಳಿದರು
ತಿಮ್ಮ ಎದ್ದು ನಿಂತು ಹೌದು ಎಂಬಂತೆ ತಲೆಯಾಡಿಸಿದ.

"ಮಕ್ಕಳೇ ಇವತ್ತು ನಿಮ್ಮ ಸ್ನೇಹಿತ ತಿಮ್ಮನ ಹುಟ್ಟುಹಬ್ಬದ ದಿನ. ಎಲ್ಲರೂ ತಿಮ್ಮನಿಗೆ ಹಾರೈಸ್ಬೇಕು. ತಿಮ್ಮ ಬಾ ಇಲ್ಲಿ" ಅಟೆಂಡೆನ್ಸ್ ಮರೆತು ತಿಮ್ಮನಿಗೆ ಹಾರೈಸಲು ಅಣಿಯಾದರು ಮೇಡಂ. ಮಕ್ಕಳೆಲ್ಲರೂ ಒಂದುಗೂಡಿ ತಿಮ್ಮನಿಗೆ ಹುಟ್ಟುಹಬ್ಬದ ಶುಭಾಶಯವನ್ನು ಹಾಡಿದರು.

"ಹ್ಯಾಪಿ ಬರ್ತ್ಡೇ ಟು ಯೂ, ಹ್ಯಾಪಿ ಬರ್ತ್ಡೇ ಟು ಯೂ, ಹ್ಯಾಪಿ ಬರ್ತ್ಡೇ ಟು ಯು ಡಿಯರ್ ತಿಮ್ಮ, ಹ್ಯಾಪಿ ಬರ್ತ್ಡೇ ಟೂ ಯು" ತಿಮ್ಮ ಮಂದಹಾಸ ಬೀರುತ್ತ ಸಂತಸಗೊಂಡ. ಹಾರೈಸಿದವರೆಲ್ಲರಿಗೂ ಧನ್ಯವಾದ ಹೇಳುತ್ತ ತನ್ನ ಚೀಲದಿಂದ ಚಾಕಲೇಟ್ ಡಬ್ಬವನ್ನು ಹೊರ ತೆಗೆದ. ಮಕ್ಕಳಲ್ಲಿ ಆಸಕ್ತಿ ಹೆಚ್ಚಾಗಿ ಕಕ್ಷೆಯಲ್ಲಿ ಗುಸುಗುಸು ಸದ್ದುಗಳು ಕೇಳ ತೊಡಗಿದವು. ತಿಮ್ಮ ಡಬ್ಬದಿಂದ ಒಂದು ಕ್ಯಾಡಬರೀಸ್ ತಗೆದು ಮೊದಲು ಮೇಡಂಗೆ ಕೊಟ್ಟ. ಮೇಡಂ ನಗುತ್ತ ಚಾಕಲೇಟ್ ಹಾಳೆಯನ್ನು ತೆಗೆದು ತಿಮ್ಮನಿಗೆ ಪ್ರೀತಿಯಿಂದ ತಿನಿಸಿದರು.

"ಸರಿ ತಿಮ್ಮ ನೀನು ಎಲ್ರಿಗೂ ಚಾಕಲೇಟ್ ಹಂಚು. ಉಳಿದ ಮಕ್ಕಳು ಅಟೆಂಡೆನ್ಸ ಮುಗಿಸಿ. ಮೂರನೆ ಪಾಠ ಓದಲು ಶುರು ಮಾಡಿ" ಎಂದು ಆದೇಶಿಸಿದರು ಮಧ್ಯ ವಯಸ್ಸಿನ ಗಣಿತ ಮೇಡಂ.

ತಿಮ್ಮ ಎಲ್ಲ ಕಕ್ಷೆಗಳಿಗೂ ಚಾಕಲೇಟ್ ಹಂಚುತ್ತಾ ಮುನ್ನಡೆದ. ಚಾಕಲೇಟ್ ತೆಗೆದುಕೊಳ್ಳುತ್ತಾ ಮಕ್ಕಳು ಖುಷಿಯಾದದ್ದನ್ನು ಕಂಡು ಮೇಡಂಗಳು ತಮ್ಮೊಳಗೆ ಮಕ್ಕಳ ಮುಗ್ಧತೆಗೆ ನಕ್ಕರು

೧೫೦ರ ಸಂಖ್ಯೆಯ ಇಡೀ ಶಾಲೆಗೆ ಚಾಕಲೇಟ್ ಹಂಚಿ ಬಂದಿದ್ದರೂ ತಿಮ್ಮನಿಗೆ ಸಲ್ಪವೂ ಸುಸ್ತಾಗಿರಲಿಲ್ಲ. ಎಲ್ಲರೂ ಅವನನ್ನು ಸಂತೋಷದಿಂದ ಮಾತಾಡಿಸಿದರು. ಯಾವಾಗಲೂ ಗುರ್ರ್ ಎನುತ್ತಿದ್ದ ಮೇಡಂಗಳು ಸಹಾ ಅಂದು ತಿಮ್ಮನ ಹುಟ್ಟುಹಬ್ಬವೆಂದು ಅವನನ್ನು ನಗುತ್ತಾ ಹಾರೈಸಿದರು. ಅಷ್ಟರಲ್ಲೆ ಸಂಜೆಯಾಗ ತೊಡಗಿತ್ತು. ದಿನವಿಡೀ ತಿಮ್ಮ ಸಂತೋಷವಾಗಿದ್ದ.

ಕೊನೆಯ ಪಾಠದ ಹೊತ್ತಾಯಿತು. ಯಾವಾಗಲೂ ಗುರ್ರ್ ಎನುತ್ತಿದ್ದ ಕನ್ನಡ ಮೇಷ್ಟ್ರು ಹಿಂದಿನ ತಿಂಗಳ ಸಣ್ಣ ಪರೀಕ್ಷೆಯ ಪುಸ್ತಕಗಳನ್ನು ತಂದಿದ್ದರು. ಎಲ್ಲ ಮಕ್ಕಳಿಗೂ ಭಯ ಕಾಡಿತ್ತು. ಕಾರಣ ತಾವು ಮಾಡಿದ ತಪ್ಪುಗಳಿಗೆ ಸಿಗುವ ಶಿಕ್ಷೆ. ತಿಮ್ಮ ಕೂಡ ಕೊಂಚ ಹೆದರಿದ್ದ. ತಾನು ಪರೀಕ್ಷೆಯಲ್ಲಿ ಚೆನ್ನಾಗಿ ಮಾಡಿರುವ ನಂಬಿಕೆಯಿದ್ದರೂ ತಿಮ್ಮನಿಗೆ ಭಯವಿತ್ತು. ಪಕ್ಕದಲ್ಲಿ ಕುಳಿತಿದ್ದ ಸುಬ್ಬಲಕ್ಷ್ಮಿಗೆ ತಿಮ್ಮ ಪಿಸುಗುಡುತ್ತಾ ಹೇಳಿದ.

"ಹೇಯ್, ನಂಗೆ ಇವತ್ತು ಕನ್ನಡ ಸರ್ ಹತ್ರ ಒದೆ ಬಿದ್ರೆ ಮನೇಲೂ ಹೊಡೀತಾರೆ. ಇಲ್ಲಿವರ್ಗೂ ಭಯವಿಲ್ದೆ ಇದ್ದೆ. ಈಗ ಭಯವಾಗ್ತಿದೆ."

"ನೀನು ಸರಿಯಾಗಿ ನನ್ಗೆ ಹದೆರಿಸ್ತೀಯಾ. ನಿಂಗೆ ನನ್ಕಿಂತ ಜಾಸ್ತಿ ಮಾರ್ಕ್ಸ್ ಬರತ್ತೆ. ಅಲ್ದೆ ಇವತ್ತು ನಿನ್ ಹುಟ್ಟುಹಬ್ಬ. ಇವತ್ತು ನೀನು ಹ್ಯಾಪಿಯಾಗಿರ್ಬೇಕು. ಯಾರು ಹೊಡೆಯಲ್ಲ ಬಿಡು. ನೀನು ಬಚಾವ್. ಛೆ ನಾನು ಇವತ್ತೆ ಹುಟ್ಬೇಕಾಗಿತ್ತು" ತಿಮ್ಮನ ಕಸಿವಿಸಿಗೆ ತನ್ನ ಕಷ್ಟದಿಂದ ಉತ್ತರಿಸಿದಳು.

"ನಿಮ್ಗೆ ಕ್ಲಾಸಿನಲ್ಲಿ ಇನ್ನಷ್ಟು ಓದೋದು ಹಾಗು ಬರೆಯುವುದರ ಬಗ್ಗೆ ಹೇಳ್ಬೇಕು. ಬಹಳಷ್ಟು ಮಂದಿ ಸುಮಾರು ತಪ್ಪು ಮಾಡಿದ್ದೀರ. ಒಬ್ರು ಧೀರ್ಘ ಬಳಸದೆ ಇದ್ರೆ ಕಲವರು ಕಾಗುಣಿತ ಸರಿಯಾಗಿ ಬಳಸಿಲ್ಲ. ಯಾರು ಎಷ್ಟು ತಪ್ಪು ಮಾಡಿದ್ದೀರೋ ಅಷ್ಟು ಏಟುಗಳು ಈ ಕೋಲಿನಿಂದ ಬೀಳುತ್ತವೆ. ನಿಮಗೆ ಆಗ ತಪ್ಪುಗಳ ಅರಿವಾಗತ್ತೆ." ಎಂದು ಗಂಭೀರ ದನಿಯಲ್ಲಿ ಮಕ್ಕಳನ್ನು ಹೆದರಿಸಿದರು ಮೇಷ್ಟ್ರು.

"ದೇವ್ರೆ ನಂದು ಜಾಸ್ತಿ ತಪ್ಪಿರಲಿಲ್ದೆ ಇರ್ಲಪ್ಪ" ಎಂದು ಹಲವರು ಬೆಂಚಿನಡಿ ಕೈ ಜೋಡಿಸುತ್ತಾ ಕೇಳಿಕೊಂಡರು.
ತಿಮ್ಮನಿಗೆ ಭಯವಾಗಿದ್ದರೂ ಸುಬ್ಬಲಕ್ಷ್ಮಿ ಹೇಳಿದಂತೆ ಇಂದು ತನ್ನ ಹುಟ್ಟುಹಬ್ಬವಾದದ್ದರಿಂದ ತಾನು ಪಾರು ಎಂದು ನಿಶ್ಚಿಂತೆಯಿಂದ ಕುಳಿತ. ಮೇಷ್ಟ್ರು ಒಬ್ಬೊಬ್ಬರ ಪುಸ್ತಕವನ್ನು ತೆಗೆದು ಅವರಿಗೆ ಬಂದ ಅಂಕಗಳನ್ನು ಸಾರುತ್ತ ಎಷ್ಟು ತಪ್ಪು ಮಾಡಿದ್ದರೋ ಅಷ್ಟು ಏಟುಗಳನ್ನು ಕೈಯ ಮೇಲೆ ಹೊಡೆಯುತ್ತ ಬಂದರು. ಮೊದಲನೆಯ ಬೆಂಚಿನ ಮಕ್ಕಳಿಗೆ ಒಟ್ಟಾರೆ ೧೫ ಏಟುಗಳು ಬಿದ್ದವು. ಉಳಿದ ಮಕ್ಕಳ ಜೀವ ಚುರ್ ಎಂದಿತು.

ಮೂರನೆಯ ಬೆಂಚಿನಲ್ಲಿ ಕುಳಿತಿದ್ದ ತಿಮ್ಮನ ಸರಣಿ ಹತ್ತಿರ ಬರುತ್ತಿದ್ದಂತೆ ಮೇಷ್ಟ್ರ ದನಿಯು ಜೋರಾಗುತ್ತಿತ್ತು. ಮಕ್ಕಳು ಮಾಡಿದ ಕಾಗುಣಿತ ದೋಷಗಳನ್ನು ಸಾರಿ ಹೇಳುತ್ತ. ಹಾಗು ಅದರ ಸರಿಯಾದ ಉತ್ತರವನ್ನು ಹೇಳಿ ಬಾರು ಕೋಲಿನಿಂದ ಬಾರಿಸುವುದು ಮುಂದಿನ ಹುಡುಗರ ಎದೆ ನಡುಕ ಹೆಚ್ಚಿಸತೊಡಗಿತು.

"ಹಾಂ, ಸುಬ್ಬಲಕ್ಷ್ಮಿ, ನೀನು ಹೆಚ್ಚು ಮಾತಾಡಲ್ಲ ಚೆನ್ನಾಗಿ ಓದುತ್ತೀಯಾ ಅನ್ಕೊಂಡಿದ್ದೆ. ನೀನು ಬಹಳಷ್ಟು ತಪ್ಪು ಮಾಡಿದ್ದೀಯ. ೨೫ಕ್ಕೆ ೧೮ ಅಂಕ ಪಡೆದಿದ್ದೀಯಾ. ನಿನಗೆ ಕಾಗುಣಿತ ಸರಿಯಾಗಿ ಬರುವುದಿಲ್ಲ. ತಿಳಿಯದೆ ದೇವರಿಗೆ ಅವಮಾನ ಮಾಡಿದ್ದೀಯಾ. ಶಿವನು ಲಿಂಗದಿಂದ ಎದ್ದು ಬಂದನು ಅನ್ನೋ ಉತ್ತರವನ್ನ ಶಿವನು ಲಂಗದಿಂದ ಎದ್ದು ಬಂದನು ಅಂತ ಬರೆದ್ದಿದ್ದೀಯಾ? ಎಷ್ಟು ತಪ್ಪು ಅರ್ಥವಾಯಿತಾ ಎಂದು ಗದರಿಸಿದರು.

ಇನ್ನೊಮ್ಮೆ ಓದಿ ನಗು ತಡೆಯಲಾರದೆ ಮೆಲ್ಲಗೆ ನಕ್ಕರು. ಉಳಿದ ಮಕ್ಕಳೆಲ್ಲರೂ ಇನ್ನೂ ಜೋರಾಗಿ ನಕ್ಕರು. ನಿಶ್ಚಿಂತೆಯಿಂದ ತಿಮ್ಮನೂ ನಕ್ಕನು. ಪಾಪ ಸುಬ್ಬಲಕ್ಷ್ಮಿಯ ಕಣ್ಣಲ್ಲಿ ನೀರು ಹರಿಯ ತೊಡಗಿತು.

"ಎಲ್ಲಿ ಕೈಗಳನ್ನು ಮುಂದೆ ತೋರಿಸು" ಎಂದವರೆ ಆಕೆಗೆ ಆರು ಬಾರಿ ಎರಡೂ ಕೈಗಳಿಗೆ ಬಾರಿಸಿದರು. ತಿಮ್ಮನಿಗೆ ಅನುಕಂಪ ಹಾಗು ಭಯ ಎರಡೂ.

"ಹಾಂ, ತಿಮ್ಮ. ನಿನ್ನನ್ನು ದಡ್ಡ ಎಂದುಕೊಂಡಿದ್ದೆ. ಆದ್ರೆ ಒಂದೇ ಒಂದು ತಪ್ಪು ಮಾಡಿದ್ದೀಯಾ. ಕುರಿಗಳು ಹುಲ್ಲು ತಿನ್ನುತ್ತವೆ ಎನ್ನುವುದರ ಬದಲು ಕುರಿಗಳು ಹುಲು ತಿನ್ನುತ್ತವೆ ಎಂದು ಬರೆದಿದ್ದೀಯಾ. ಒತ್ತಕ್ಷರಗಳ ಮೇಲೆ ಧ್ಯಾನವಿರಲಿ." ಎಂದು ಸಹಜ ದನಿಯಲ್ಲಿ ಹೇಳಿದರು. ತಿಮ್ಮ ಸಂತಸಗೊಂಡನು. ಪುಸ್ತಕ ತೆಗೆದುಕೊಂಡು ಕುಳಿತನು.

"ತಿಮ್ಮ ನಿನಗೆ ಕೂರೋದಕ್ಕೆ ಹೇಳಿದ್ನಾ ನಾನು? ನಿನ್ ತಪ್ಪಿಗೆ ಶಿಕ್ಷೆ ಆಗ್ಬೇಕು."

"ಆದ್ರೆ ಸರ್, ಇವತ್ತು ಅವನ ಬರ್ತ್ಡೇ. ಪಾಪ ಸರ್" ಎಂದ ಹಿಂದೆ ಕುಳಿತಿದ್ದ ಗುಂಡ.

"ತಪ್ಪು ತಪ್ಪೇ. ಬರ್ತ್ಡೇ ಅಂದ ಮಾತ್ರಕ್ಕೆ ತಪ್ಪಿಗೆ ಶಿಕ್ಷೆ ಆಗ್ಬಾರ್ದು ಅಂತ ಏನಿಲ್ಲ, ಎಲ್ಲಿ ತಿಮ್ಮ ಕೈ ತೋರ್ಸು" ಎಂದು ಆದೇಶಿಸಿದರು ಮೇಷ್ಟ್ರು. ತಿಮ್ಮ ಹೆದರುತ್ತಲೇ ಕೈ ಚಾಚಿದ.

"ರಪ್" ಎಂದು ತಿಮ್ಮನ ಕೈಗೆ ಏಟು ಬಿದ್ದಿತು. ಜೊತೆಗೆ ಕಣ್ಣಲ್ಲಿ ನೀರು.

ತಿಮ್ಮ ಮನೆಗೆ ಹಿಂದುರುಗುವ ದಾರಿ ಪೂರ್ತಿ ಕನ್ನಡ ಮೇಷ್ಟ್ರನ್ನು ನಿಂದಿಸಿದನು. ತಾನು ಮಾಡಿದ್ದು ಕೇವಲ ಒಂದು ತಪ್ಪು. ಹುಟ್ಟುಹಬ್ಬವೆಂದು ಕ್ಷಮಿಸಿದ್ದರೆ ಏನಾಗುತ್ತಿತ್ತು? ಎಲ್ಲರೂ ಅಷ್ಟೊಂದು ತಪ್ಪು ಮಾಡಿದ್ದಾರೆ. ನಯವಾಗಿ ತಿಳಿ ಹೇಳಿದ್ದರೆ ತಪ್ಪು ತಿದ್ದುತ್ತಿದ್ದೆ. ಹೊಡೆಯಬೇಕೇಕೆ? ತಿಮ್ಮ ಮನೆ ಸೇರಿದನು. ಅಮ್ಮನಿಗೆ ನಡೆದ ಘಟನೆ ವಿವರಿಸಿದನು.

"ನೀನು ತಪ್ಪು ಮಾಡಿದ್ದಿ ನಿಜ, ಅದಕ್ಕೆ ಹೊಡೆದಿದ್ದಾರೆ. ನೀನು ಈ ಶಿಕ್ಷೆನಾ ಚೆನ್ನಾಗಿ ಯೋಚಿಸಿ ಮುಂದೆ ತಪ್ಪು ಮಾಡಲ್ಲ. ಬಾ ಕೈಗೆ ಏನಾದ್ರೂ ಹಚ್ಚೇನಿ" ತಿಮ್ಮನನ್ನು ಅಮ್ಮ ಸಂತೈಸಿದರು. ಜೊತೆಗೆ ಕೆಲವು ಚಾಕಲೇಟ್ ಕೊಟ್ಟು ಆಟವಾಡಲು ಹೊರಗೆ ಕಳುಹಿಸಿದರು. ತಿಮ್ಮ ಆಟದ ಮಧ್ಯೆ ಕೈಗೆ ಬಿದ್ದ ಏಟನ್ನು ಮರೆತನು.

ನಾವುಗಳು ನಮ್ಮ ಬದುಕಿನ ವಿಶೇಷ ದಿನವನ್ನು ಏಕೆ ಆಚರಿಸುತ್ತೇವೆ? ಒಂದೊಂದು ಆಚರಣೆಗೂ ನಾವು ದೇವರನ್ನು ನಮ್ಮ ಜೀವವನ್ನು ಉಳಿಸಿದ್ದಕ್ಕಾಗಿ ಪೂಜಿಸಬೇಕೆ? ಅಥವಾ ನಮ್ಮ ಈಗಿನ ಹಾಗು ಮುಂದಿನ ಕಷ್ಟಗಳಿಗೆ ಸಹಾಯ ಮಾಡು ಎಂದು ಕೇಳಿಕೊಳ್ಳಬೇಕೆ? ತಿಮ್ಮನ ತಪ್ಪು ತಿದ್ದುವ ಪದ್ದತಿ ಸರಿಯೇ? ಹೀಗೆ ಪ್ರಶ್ನೆಗಳು ಬಹಳ! ಈ ಸಂಚಿಕೆಯಿಂದ ನನ್ನೊಡನೆ ದೇವರನ್ನು ಹುಡುಕುವ ಕಾರ್ಯಕ್ಕೆ ನೀವು ಸೇರಬಹುದು. ಮುಂಬರುವ ಸಂಚಿಕೆಗಳಲ್ಲಿ ಗೂಬೆ ತಿಮ್ಮನ ಕಥೆಗಳೊಂದಿಗೆ ತಿಮ್ಮನ ತರ್ಲೆ ಪ್ರಶ್ನೆಗೆ ಉತ್ತರ ಹುಡುಕೋಣ.

# ಸಂಚಿಕೆ ೮ - ಚಂದಿರವದನ

ಹೋಂವರ್ಕ್ ಮುಗಿಸಿ ಇನ್ನೇನು ಚಿತ್ರಮಂಜರಿ ನೋಡಬೇಕೆಂದು ಹೊರಟಾಗಲೇ ಈ ಬಾರಿ ಮಳೆಯ ಕಡಿಮೆಯಾದ ಕಾರಣ ಹೇಳಿ ಕೆ.ಇ.ಬಿಯವರು ಕರೆಂಟ್ ತೆಗೆದರು.

"ಛೆ! ವಾರಕ್ಕೆ ಒಂದು ದಿನ ಒಳ್ಳೆಯ ಹಾಡು ನೋಡೋಣ ಅಂದ್ರೆ ಹಾಳಾದ್ದು ಈ ಕರೆಂಟು ಈಗ್ಲೇ ಹೋಗ್ಬೇಕಾ?" ಕೆ.ಇ.ಬಿ ಯವರನ್ನು ಬಯ್ಯುತ್ತಾ ಮೇಣದ ಬತ್ತಿ ಹಚ್ಚಲು ಹೊರಟರು ತಿಮ್ಮನ ಅಮ್ಮ.

"ಯೇಯ್! ಕಣ್ಣಾಮುಚ್ಚಾಲೆ!" ಎಂದು ಕಿರುಚುತ್ತಾ ಕತ್ತಲಲ್ಲಿ ಕಣ್ಣಾಮುಚ್ಚಾಲೆ ಆಡಲು ಹೊರಗೆ ಓಡಿದರು ಮಕ್ಕಳಿಬ್ಬರೂ.

ತಮ್ಮ ಗುಪ್ತ ಶಬ್ಧವನ್ನು ಮೊಳಗಿಸುವ ಮೊದಲೇ ಅಕ್ಕಪಕ್ಕದಲ್ಲಿದ್ದ ಮಕ್ಕಳೆಲ್ಲರೂ ಹೊರಗೆ ಬಂದಿದ್ದರು. ಯಾವಾಗಲೂ ಮೊದಲು ಔಟಾಗುತ್ತಿದ್ದ ಸಂತೋಷನನ್ನು ಎಣಿಸಲು ಹೇಳಿ ಎಲ್ಲರೂ ಗುಪ್ತ ಸ್ಥಳಗಳನ್ನು ಹುಡುಕಲು ಅಣಿಯಾದರು.

"ಕಣ್ಣಾಮುಚ್ಚೆ ಕಾಡೆಗೂಡೆ…" ಎಂದು ಹಾಡು ಮುಗಿಸಿ. ಸಂತೋಷ ತನ್ನ ಗೆಳೆಯರನ್ನು ಹುಡುಕುವ ಸಿ.ಐ.ಡಿ ಕಾರ್ಯದಲ್ಲಿ ತೊಡಗಿದನು. ತಿಮ್ಮ ತನ್ನ ಹೊಸ ಸ್ಥಳವನ್ನು ಆಗಲೇ ಮುಂದಾಲೋಚಿಸಿ ಸಂತೋಷನ ಕೈಗೆ ಸಿಗದಹಾಗೆ ತಯಾರಿ ಮಾಡಿಕೊಂಡಿದ್ದನು. ಬೀದಿಯ ಬಳಿಯಲ್ಲಿದ್ದ ಮರವನ್ನೇರಿ ಕುಳಿತಿದ್ದನು.

"ಗುಂಡ ನಂಬರ್ ಒನ್, ಅಲ್ಲಿ ಬಟ್ಟೆ ಒಗೆಯೋ ಕಲ್ಲಿಂದೆ. ಬಾ ಆಚೆ" ಸಂತೋಷ ತನ್ನ ಮೊದಲನೆಯ ಬೇಟೆಯನ್ನು ಸುಲಭವಾಗಿ ಹಿಡಿದಿದ್ದನು.

"ಉಳಿದವರೇ ನನ್ನ ಕಾಪಾಡ್ರಪ್ಪ!" ಎಂದು ಕತ್ತಲಿನಲ್ಲಿ ಜೋರಾಗಿ ಬೇಡಿಕೊಂಡ ಗುಂಡ.

ತಿಮ್ಮ ಸರಿಯಾದ ಸಮಯಕ್ಕೆ ಕಾಯುತ್ತ ಕುಳಿತ. ಹಾಗೆ ಕುಳಿತಾಗ ತಿಮ್ಮನ ಗಮನ ಹುಣ್ಣಿಮೆಯ ಆಕಾಶದೆಡೆಗೆ ಹರಿಯಿತು. ಸ್ವಚ್ಛ ಹೊಳಪಿನ ಚಂದ್ರನನ್ನು ಮುಂಚೆ ಎಂದು ಅಷ್ಟು ಸಂದರವಾಗಿ ಕಂಡಿರಲಿಲ್ಲ ತಿಮ್ಮ. ದುಂಡನೆಯ ಚಂದಿರನ ವದನ ತಿಮ್ಮನನ್ನು ಮೂಕನಾಗಿಸಿತ್ತು. ಚಂದ್ರ ತನ್ನನ್ನು ನೋಡುತ್ತ ಮಂದಹಾಸ ಬೀರುತ್ತಿರುವಂತೆನಿಸಿತು ತಿಮ್ಮನಿಗೆ.

ಚಂದಿರನ ಮೊಗದಲ್ಲಿ ಎರಡು ಕಣ್ಣು, ಮೂಗು ಹಾಗು ತುಂಟ ನಗೆಯನ್ನು ತಿಮ್ಮ ಕಂಡನು. ಚಂದ್ರ ಏಕೆ ತನ್ನನ್ನು ನೋಡುತ್ತಿರುವನು? ನಮ್ಮ ಕಣ್ಣಾಮುಚ್ಚಾಲೆ ಆಟವನ್ನು ನೋಡಿ ನಗುತ್ತಿರುವನೆ? ಚಂದ್ರ ಹೀಗೆ ಸುಂದರವಾಗಿ ಕಾಣುವಾಗ ಸೂರ್ಯನನ್ನು ಏಕೆ ನೋಡಲಾಗುವುದಿಲ್ಲ? ಹೀಗೆ ಪ್ರಶ್ನೆಗಳು ಬೆಳದಿಂಗಳಲ್ಲಿ ತಿಮ್ಮನ ತಲೆಯಲ್ಲಿ ಮೂಡತೊಡಗಿದವು.

ಅಷ್ಟರಲ್ಲಿ ತಿಮ್ಮನಿಗೆ ತಮ್ಮ ಆಟದ ಬಗ್ಗೆ ನೆನಪಾಗಿ. ಮೆಲ್ಲಗೆ ಮರದಿಂದಿಳಿದು ಸಂತೋಷನ ಹಿಂದೆಯಿಂದ ಪಟಾರ್ ಎಂದು ಬೆನ್ನಿಗೆ ಬಾರಿಸಿದನು.

"ಔಟ್!" ಎಂದು ಎಲ್ಲರೂ ಬಿಲದಿಂದ ಹೊರಬಂದ ಇಲಿಗಳಂತೆ ಓಡಿ ಬಂದು ಕೂಗಿದರು. ಸಂತೋಷನ ಸಂತಸ ಮಾಯವಾಗಿತ್ತು. ಮತ್ತೆ ಕಣ್ಣಾಮುಚ್ಚಾಲೆ ಆಡತೊಡಗಿದರು ಮಕ್ಕಳೆಲ್ಲರು. ಸಂತೋಷ ಎಣಿಸಲು ಶುರುಮಾಡಿದರೆ ಉಳಿದವರು ಅಡಗಿದರು. ತಿಮ್ಮ ಹಾಗೂ ಗುಂಡ ಬಾವಿ ಕಟ್ಟೆಯ ಹಿಂದೆ ಅಡಗಿ ಕುಳಿತರು.

ತಿಮ್ಮ ಅಡಗಿದ್ದಲಿಯೇ ತನ್ನ ಚಂದಿರವದನ ವಿಸ್ಮಯವನ್ನು ಮುಂದುವರೆಸಿದನು. ಚಂದ್ರ ಯಾವಾಗಲೂ ನಗುತ್ತಿರುವಂತೆ ಏಕೆ ಕಾಣುವನು? ಇದರ ಹಿಂದಿನ ಕಾರಣವೇನು? ಚಂದ್ರ ರಾತ್ರಿ ಮಾತ್ರ ಏಕೆ ಕಾಣುತ್ತಾನೆ? ಹಗಲಿನಲ್ಲೂ ಚಂದ್ರ ನಗುವನೆ? ಹೀಗೆ ಪ್ರಶ್ನೆಗಳನ್ನು ಹೊಂಚುತ್ತಿರುವಾಗ ಗುಂಡ ತಿಮ್ಮನನ್ನು ಕೇಳಿದ

"ತಿಮ್ಮ ಏನ್ನೋಡ್ತಾ ಇದ್ದೀ? ಆಟ ಆಡೋಣ ಬಾ"

"ಹೇ ಗುಂಡ, ಅಲ್ನೋಡೋ ಚಂದ್ರನ್ನಾ, ಎಷ್ಟು ಚೆನ್ನಾಗಿದ್ದಾನೆ, ಯಾಕೆ ಹೀಗೆ ನಗ್ತಾ ಇದ್ದಾನೆ?"

"ಅಯ್ಯೋ! ಗಣಪತಿ ಹಬ್ಬದ ಹತ್ತಿರ ಹೀಗೆ ಚಂದ್ರನ್ನಾ ನೋಡ್ಬಾರ್ದೋ, ನಿನ್ಗೆ ಅಪವಾದ ಬರತ್ತೆ" ಆಕಾಶದೆಡೆಗೆ ನೋಡದೆ ಗುಂಡ ಉತ್ತರಿಸಿದನು

ಏಕೆ ನೋಡಬಾರದು ಎಂಬಂತೆ ತಿಮ್ಮ ಗುಂಡನನ್ನು ನೋಡಿದ

"ಗಣಪತಿ ಭೂಮಿಗೆ ಹಬ್ಬಕ್ಕೆ ಅಂತ ಬರೋವಾಗ ಬಿದ್ದನಂತೆ.ಆವಾಗ ಚಂದ್ರ ಅವನನ್ನ ನೋಡಿ ನಕ್ಕನಂತೆ. ಅದಕ್ಕೆ ಗಣಪತಿ ಅರ್ಧ ದಂತ ತಗೆದು ಚಂದ್ರನಿಗೆ ಬಿಸಾಕಿದ್ದನಂತೆ. ಆವಾಗಿಂದ ಗಣಪತಿ ಹಬ್ಬ ಬಂದ್ರೆ ಚಂದ್ರನ್ನ ನೋಡಿದ್ರೆ ಅಪವಾದ ಬರತ್ತೆ ಅಂತ ಶಾಪ ಹಾಕಿದ್ದನಂತೆ. ಗೊತ್ತಿಲ್ವಾ ನಿಂಗೆ? ನಮ್ಮಮ್ಮ ಹೇಳಿದಾರೆ ಚಂದ್ರನ್ನ ನೋಡ್ಬೇಡ ಅಂತ. ನೀನು ಈಗ ನೋಡಿದ್ದಿ ನಿಂಗೆ ಅಪವಾದ ಖಂಡಿತ"

ತಿಮ್ಮ ಕೊಂಚ ಹೆದರಿ, "ಚಂದ್ರ ಇವಾಗ ಅದಕ್ಕೆ ನಗ್ತಾ ಇದ್ದಾನಾ? ಗಣಪತಿ ಹಬ್ಬ ಬಂದ್ರೆ ಚಂದ್ರ ನಗ್ತಾನೆ ಅನ್ಸತ್ತೆ, ಆದ್ರೆ ನೋಡೋ ಎಷ್ಟು ಚೆನ್ನಾಗಿದ್ದಾನೆ, ಬೆಳ್ಳಗೆ ದುಂಡಗೆ. ಅದ್ಸರಿ ಅಪವಾದ ಬಂದ್ರೆ  ಏನ್ ಮಾಡೋದು?"

"ತಿಮ್ಮ, ಗುಂಡ ಭಾವಿ ಹಿಂದೆ, ಔಟ್, ಹೊರ್ಗಡೆ ಬನ್ನಿ"  ಸಂತೋಷ ಸಂತಸದಿಂದ ಜೋರಾಗಿ ಕೂಗಿದ.

"ಛೆ! ನೀನು ಮಾತಾಡ್ಸಿದ್ದಕ್ಕೆ ನಾವು ಸಿಕ್ಕಿದ್ವಿ. ಎಲ್ಲಾ ನಿನ್ನಿಂದಾನೆ" ನಿಂದಿಸಿದನು ಗುಂಡ.

ಆದರೆ ತಿಮ್ಮನಿಗೆ ತನ್ನದೇ ಚಿಂತೆ. ತಾನು ಚಂದಿರನನ್ನು ನೋಡಿದ್ದರಿಂದ ಗಣಪತಿ ವಿರುದ್ಧವಾಗಿದ್ದೆ ಹಾಗೂ ತನಗೆ ಅಪವಾದ ಬರುವುದು ಎಂಬ ಚಿಂತೆ ಕಾಡತೊಡಗಿತು. ಅಷ್ಟರಲ್ಲಿ ಕರೆಂಟು ಬಂತು. ಎಲ್ಲಾ ಮಕ್ಕಳು ಆಟವನ್ನು ಬಿಟ್ಟು ಉಳಿದ ಭಾಗದ ಚಿತ್ರಮಂಜರಿ ನೋಡಲು ತಮ್ಮ ತಮ್ಮ ಮನೆಗಳಿಗೆ ಓಡಿದರು. ಕೊನೆಯ ಹಾಡು ನೋಡುವುದಕ್ಕೆ ಸಿಕ್ಕಿದ್ದನ್ನು ಕಂಡು ಸಂತಸಪಟ್ಟರು.

-~-~-

ಮಾರನೆಯ ದಿನ ಮುಂಜಾನೆ ಎಂದಿನಂತೆ ತಿಮ್ಮ ಶಿಸ್ತಾಗಿ ತನ್ನ ಶಾಲೆಯ ಯುನಿಫಾರ್ಮ್ ಹಾಕಿಕೊಂಡು ಹೊರಟ. ಅಂದು ಪ್ರಾರ್ಥನೆಯ ವೇಳೆಯಲ್ಲಿ ಮಕ್ಕಳಿಗೆ ಹೊಸ ಮೇಡಂನ ಬಗ್ಗೆ ತಿಳಿಸಲಾಯಿತು. ವಿಜ್ಞಾನದ ಪಾಠಕ್ಕೆ ಹೊಸದಾಗಿ ಶ್ರೀಮತಿ ಮೇಡಂ ಶಾಲೆಗೆ ಸೇರಿದ್ದರು. ತಮ್ಮ ಮೊದಲನೆಯ ಪಾಠಕ್ಕೆ ತಿಮ್ಮನ ಕಕ್ಷೆಗೆ ಬಂದರು ಶ್ರೀಮತಿ ಮೇಡಂ.

"ಮಕ್ಕಳೇ, ಇಂದಿನಿಂದ ನಿಮಗೆ ವಿಜ್ಞಾನದ ಪಾಠವನ್ನು ನಾನು ಮುಂದುವರೆಸುವೆ. ನನಗೆ ತಿಳಿಸಿದ ಹಾಗೆ ನಿಮ್ಮ ಕಕ್ಷೆಯಲ್ಲಿ ಬಹಳಷ್ಟು ಜಾಣರಿದ್ದೀರಿ. ಆದರೆ ನಿಮಗೆ ಇನ್ನಷ್ಟು ಮಾಹಿತಿಯನ್ನು ನಾನು ಕೊಡುವೆ. ಎಲ್ಲರೂ ಚೆನ್ನಾಗಿ ಓದಬೇಕು. ನಾನು ಪಾಠ ಮಾಡುವಾಗ ಗಲಾಟೆ ಕೇಳಿ ಬಂದರೆ ಅವರನ್ನು ಶಿಕ್ಷಿಸುವೆ. ಆದರೆ ನಿಮ್ಮಲ್ಲಿ ಹೆಚ್ಚಿನ ಶಿಸ್ತು ಬರಲಿ ಎಂದು ನಿಮ್ಮಲ್ಲಿ ಒಬ್ಬರನ್ನು ಕಕ್ಷೆಯ ಮೆಂಟರ್ ಮಾಡುವೆ. ಯಾರು ಮೆಂಟರ್ ಆಗಲು ಇಷ್ಟಪಡುವಿರಿ ಕೈಯೆತ್ತಿ"

ತಿಮ್ಮನಿಗೆ ಮೆಂಟರ್ ಎಂದರೆ ಏನು ಎಂದು ತಿಳಿಯದಿದ್ದರೂ ಉತ್ಸಾಹದಿಂದ ಕೈಯೆತ್ತಿದ. ಇನ್ನೂ ಕಲವು ಮಕ್ಕಳು ಮೆಲ್ಲಗೆ ಕೈ ಎತ್ತಿದರು. ಮೇಡಂ ತಿಮ್ಮನ ಉತ್ಸಾಹವನ್ನು ಕಂಡು ತಿಮ್ಮನನ್ನು ಮೆಂಟರ್ರಾಗಿ ನೇಮಿಸಿದರು.

"ನೋಡು ಮಗು, ಮೆಂಟರ್ ಆಗಿ ನೀನು ಬಹಳಷ್ಟು ಶಿಸ್ತು ವಹಿಸಬೇಕು. ಯಾರಾದರು ಗಲಾಟೆ ಮಾಡಿದ್ರೆ ಅವರ ಹೆಸರು ಬರೆದು ನನ್ಗೆ ತಿಳಿಸು. ಯಾರು ಹೋಂವರ್ಕ್ ಮಾಡಿಲ್ವೋ ಅವರ ಹೆಸರನ್ನು ಕೂಡ ನಂಗೆ ತಿಳಿಸ್ಬೇಕು. ಸರಿನಾ?"

ತಿಮ್ಮ ತಲೆಯಾಡಿಸಿದ. ಮೆಂಟರ್ ಆದ ಖುಷಿಯಿಂದ ತಿಮ್ಮ ಕೊಂಚ ಜಂಭದಿಂದ ಎಲ್ಲರನ್ನೂ ಗಮನಿಸಿದ. ಮೇಡಂ ಮಕ್ಕಳಿಗೆ ಪುಸ್ತಕ ತರಲು ತಿಮ್ಮನನ್ನು ಕಾವಲಿರಿಸಿ ಹೊರಹೋದರು. ಮಕ್ಕಳೆಲ್ಲರೂ ತಮ್ಮತಮ್ಮಲ್ಲಿ ಗುಸುಪಿಸು ಎಂದು ಮಾತು ಶುರು ಮಾಡಿದರು. ತಿಮ್ಮ ಠಕ್ಕನೆ

"ಶ್! ಸದ್ದು ಮಾಡ್ಬೇಡಿ. ನಿಮ್ಮ ಹೆಸರು ಮೇಡಂಗೆ ಹೋಗ್ಬಾರ್ದು ಎಂದ್ರೆ ಸುಮ್ಮನಿರಿ" ಎಂದು ಒಮ್ಮೆ ಜೋರಾಗಿ ಎಚ್ಚರಿಸಿದ.

ಆದರೆ ಮಕ್ಕಳು ತಿಮ್ಮನ ಮಾತಿಗೆ ಬೆಲೆ ಕೊಡಲಿಲ್ಲ. ತಿಮ್ಮ ತನ್ನ ಪುಸ್ತಕ ತೆಗೆದು ಮಾತನಾಡುವವರ ಹೆಸರನ್ನು ಬರೆಯ ತೊಡಗಿದ. ಕೆಲವರು ಇದನ್ನು ಕಂಡು ಸುಮ್ಮನಾದರು. ಆದರೆ ಕೆಲವರು ಅದನ್ನು ಕಡೆಗಣಿಸಿದರು. ಅವರಲ್ಲಿ ತಿಮ್ಮನ ಆಪ್ತ ಮಿತ್ರ ಗುಂಡ ಕೂಡ ಒಬ್ಬ. ಗುಂಡ ತಿಮ್ಮ ತನ್ನ ಹೆಸರು ಬರೆಯುವುದಿಲ್ಲವೆಂದುಕೊಂಡು ಮಾತು ಮುಂದುವರೆಸಿದ. ಆದರೆ ತಿಮ್ಮ ತನ್ನ ಶಿಸ್ತು ಪರಿಪಾಲಿಸುತ್ತಾ ಮಾತನಾಡುತ್ತಿದ್ದ ಎಲ್ಲರ ಹೆಸರನ್ನು ಮುಂದುವರೆಸಿದ. ಅಷ್ಟರಲ್ಲಿ ಶೀಮತಿ ಮೇಡಂ ಕಕ್ಷೆಗೆ ಬಂದಿದ್ದರು. ತಿಮ್ಮನ ಕೈಯಲ್ಲಿನ ಹಾಳೆ ನೋಡಿ

"ಭೇಷ್ ತಿಮ್ಮಾ! ಯಾರ್ಯಾರು ಮಾತಾಡಿದ್ರು ಅವರ ಹೆಸರನ್ನು ಒಂದೊಂದಾಗಿ ಕೂಗು. ಅವರೆಲ್ಲರಿಗೂ ಕೈಯ ಮೇಲೆ ಒಂದೊಂದು ಏಟು"

ತಿಮ್ಮ ಮೇಡಂ ಹೇಳಿದಂತೆ ಮಾಡಿದ. ಕಕ್ಷೆಯ ಅರ್ಧಕ್ಕಿಂತ ಹೆಚ್ಚು ಮಕ್ಕಳಿಗೆ ಕೋಲಿನ ರುಚಿ ಕಂಡಿತ್ತು. ಎಲ್ಲರೂ ತಿಮ್ಮ ತಮ್ಮ ಹೆಸರನ್ನು ಬರೆದಿದ್ದಕ್ಕೆ ತಿಮ್ಮನನ್ನು ನಿಂದಿಸಿದರು.ತಿಮ್ಮ ಮೇಡಂ ತನಗೆ ಶಾಭಾಶ್ ಹೇಳಿದ್ದಕ್ಕೆ ಸಂತಸದಿಂದಿದ್ದ. ದಿನವಿಡೀ ತಾನು ಮಾಡಿದ ಕೆಲಸಕ್ಕೆ ಹೆಮ್ಮೆ ಪಟ್ಟ.

–~–~–

ಎಂದಿನಂತೆ ಸಂಜೆ ಆಟವಾಡಲು ತಿಮ್ಮ ಹೊರಗೆ ಬಂದ. ಉಳಿದ ಮಕ್ಕಳು ಆಗಲೇ ಆಟವಾಡಲು ಶುರು ಮಾಡಿದ್ದರು. ತಿಮ್ಮ ಕೂಡ ಅವರೊಡನೆ ಆಡಲು ಅಣಿಯಾದ. ಆದರೆ ಎಲ್ಲರೂ ತಿಮ್ಮನನ್ನು ನಿರ್ಲಕ್ಷಿಸಿ ಇಂದು ತಿಮ್ಮನಿಂದ ತಮಗಾದ ಶಿಕ್ಷೆಯ ಬಗ್ಗೆ ತಿಮ್ಮನನ್ನು ನಿಂದಿಸಿದರು. ತಿಮ್ಮ ತಾನು ಮಾಡಿದ್ದು ಸರಿ ಹಾಗು ತಾನು ಮೆಂಟರ್ ಆಗಿ ಶಿಸ್ತು ಕಾಪಾಡಲು ಹೀಗೆ ಮಾಡಬೇಕಾಯ್ತು ಎಂದು ಹೇಳಿದ. ಆದರೆ ಅವನ ಮಾತು ಯಾರು ಕೇಳಲಿಲ್ಲ.

"ಇಂದಿನಿಂದ ನಿನ್ನೊತೆ ಟೂ" ಎಂದು ಗುಂಡ ಹಾಗು ಅವನ ಗೆಳೆಯರ ಸಮೂಹ ತಿಮ್ಮನನ್ನು ಆಚೆ ದೂಡಿದರು. ತಿಮ್ಮ ಬೇಸರದಿಂದ ಮನೆಗೆ ಬಂದು ನಡೆದ ಘಟನೆಯನ್ನು ಅಮ್ಮನಿಗೆ ಹೇಳಿದ. ಅಮ್ಮ ತಿಮ್ಮನನ್ನು ಸಂತೈಸಿದಳು

"ಬೇಸರ ಮಾಡ್ಕೋ ಬೇಡ ತಿಮ್ಮಾ. ನೀನ್ ಮಾಡಿದ್ದು ಸರಿ. ಒಂದೊಂದ್ಸಾರ್ತಿ ನಾವು ಎಲ್ಲರನ್ನು ಸಂತೋಷವಾಗಿ ಇಡೋಕೆ ಆಗಲ್ಲ.ಇದರಲ್ಲಿ ನಿನ್ನ ತಪ್ಪಿಲ್ಲ. ಎರಡು ಮೂರು ದಿನ ಬಿಡು. ಅವರೇ ಆಟಕ್ಕೆ ಬರ್ತಾರೆ."

"ಆದ್ರೆ ಅಮ್ಮ, ನಾನು ಚಂದ್ರನ್ನ ನೋಡ್ದೆ ಅದಕ್ಕೆ ನಂಗೆ ಈ ಅಪವಾದ ಬಂತಾ? ಅಷ್ಟು ಜೋರಾಗಿ ಬಿಳಿ ಬಣ್ಣದ ಚಂದ್ರ ಕಣ್ಣಿಗೆ ಕಾಣೇ ಕಾಣ್ತಾನೆ. ಅದಕ್ಕೆ ಗಣಪತಿ ನನ್ಮೇಲೆ ಕೋಪ ಮಾಡ್ಕೊಂಡು ನಂಗೆ ಈ ರೀತಿ ಮಾಡಿದ್ನಾ? ನಂಗೆ ಮೆಂಟರ್ರೂ ಬೇಡ ಏನೂ ಬೇಡ. ನಾನು ಮೊದಲಿನಂತೆ ಹುಡುಗರ ಜೊತೆ ಆಟ ಆಡಿದ್ರೆ ಸಾಕು."

ಅದಕ್ಕೆ ಅಮ್ಮ ನಗುತ್ತಾ ಸಂತೈಸಿದಳು "ಅಯ್ಯೋ ತಿಮ್ಮ! ಗಣಪತಿಗೆ ಮಕ್ಕಳೆಂದ್ರೆ ತುಂಬ ಇಷ್ಟಾ. ನೀನು ಯೋಚ್ನೆ ಮಾಡ್ಬೇಡ. ಹಬ್ಬದ ದಿನ ೫೧ ಗಣಪತಿ ವಿಗ್ರಹಕ್ಕೆ ಅಕ್ಕಿಕಾಳು ಹಾಕು. ನಿಂಗೇನು ಆಗಲ್ಲ. ಅಲ್ದೆ ನೀನು ಶಿಸ್ತು ಪಾಲಿಸ್ಬೇಕು. ಅದು ಒಳ್ಳೇದೆ. ಚಿಂತೆ ಬಿಡು"

ತಿಮ್ಮನಿಗೆ ಅಪವಾದದ ಚಿಂತೆ ವಾರಪೂರ್ತಿ ಕಾಡಿತು. ತನ್ನ ಪ್ರೀತಿಯ ಗೆಳೆಯ ಗುಂಡ ತನ್ನೊಂದಿಗೆ ಮಾತನಾಡದಿದ್ದನ್ನು ಕಂಡು ಬೇಸರಗೊಂಡನು. ಚಂದಿರವದನ ತನಗೆ ಸಂತಸ ಹಾಗು ದು:ಖ ಎರಡೂ ಮೂಡಿತು. ಚಂದ್ರನ ಬಗ್ಗೆ ಹೆಚ್ಚು ತಿಳಿಯುವ ಅಕಾಂಕ್ಷೆ ಕ್ಷಣಕಾಲ ಮರೆಯಾಯಿತು.

ತಿಮ್ಮ ಚಂದ್ರನನ್ನು ನೋಡಿದ್ದು ತಪ್ಪೇ? ತಾನು ಶಿಸ್ತು ಪಾಲಿಸಿದ್ದು ತಪ್ಪೇ? ತಿಮ್ಮನಿಗೆ ಬೇಸರವಾಗಲು ಗಣಪತಿ ಕಾರಣವೇ? ಇವುಗಳ ಉತ್ತರ ನಮಗೆ ಗೊತ್ತು. ಆದರೆ ಇಂತಹ ಸನ್ನಿವೇಶಗಳು ನಿಜಜೀವನದಲ್ಲಿ ನಮ್ಮನ್ನು ಕಾಡಿದಾಗ ನಾವು ಜನರ ಒತ್ತಡಕ್ಕೆ ಒಗ್ಗುವುದು ಏತಕ್ಕೆ? ನಮ್ಮ ಶಿಸ್ತನ್ನು ಸಡಿಲಗೊಡಿಸುವುದು ಏಕೆ? ಹೀಗೆ ದೇವರು ನಮ್ಮನ್ನು ಕಾಪಾಡುವನು ಎಂದು ಪೂಜಿಸುವುದು ಏಕೆ? ಹೀಗೆ ಪ್ರಶ್ನೆಗಳು ಬಹಳ! ಈ ಸಂಚಿಕೆಯಿಂದ ನನ್ನೊಡನೆ ದೇವರನ್ನು ಹುಡುಕುವ ಕಾರ್ಯಕ್ಕೆ ನೀವು ಸೇರಬಹುದು. ಮುಂಬರುವ ಸಂಚಿಕೆಗಳಲ್ಲಿ ಗೂಬೆ ತಿಮ್ಮನ ಕಥೆಗಳೊಂದಿಗೆ ತಿಮ್ಮನ ತರ್ಲೆ ಪ್ರಶ್ನೆಗೆ ಉತ್ತರ ಹುಡುಕೋಣ.